**25ನೇ ವಾರ್ಷಿಕ ಸಾಮಾನ್ಯ ಸಭೆ ದಿನಾಂಕ: 08.09.2026**

ರಾಯಲ್ ತ್ರಿಪುರವಾಸಿನಿ ಗೇಟ್ ನಂ. 2, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ, ಬೆಂಗಳೂರು–560080

Swabhimani Sahakari

Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 23
Issue - 08
August - 2026



ಆಗಸ್ಟ್ 15,
ಸ್ವಾತಂತ್ರ್ಯ ದಿನಾಚರಣೆ

**80ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು**

ಆಗಸ್ಟ್ 17
ನಾಗರ ಪಂಚಮಿ



ಆಗಸ್ಟ್ 21
ವರಮಹಾಲಕ್ಷ್ಮೀ ವ್ರತ



ಆಗಸ್ಟ್ 26
ಈದ್ ಮಿಲಾದ್



ಆಗಸ್ಟ್ 28
ರಕ್ಷಾ ಬಂಧನ್



ಸೌಹಾರ್ದ ಸಹಕಾರಿಗಳ ಸಂಖ್ಯೆ : 6800

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1761

# ಕೃತಕ ಬುದ್ಧಿಮತ್ತೆ (AI) ಅಳವಡಿಕೆ – ಸಹಕಾರಿ ಸಂಘಗಳ ಆರ್ಥಿಕ ಸ್ವಾವಲಂಬನೆಗೆ ಹೊಸ ಆಯಾಮ



**ಜಿ. ನಂಜನಗೌಡ**

> ಆತ್ಮೀಯ ಸಹಕಾರಿ ಬಂಧುಗಳಿಗೆ ೮೦ನೇ ಸ್ವಾತಂತ್ರ್ಯ ದಿನಾಚರಣೆಯ, ನಾಗರ ಪಂಚಮಿಯ, ಈದ್–ಮಿಲಾದ್ ಹಾಗೂ ಶ್ರೀ ವರಮಹಾಲಕ್ಷ್ಮೀ ಹಬ್ಬಗಳ ಶುಭ ಹಾರೈಕೆಗಳು. ಪ್ರತಿಯೊಂದು ಹಬ್ಬವೂ ನಮಗೆ ಹೆಚ್ಚಿನ ಸ್ಫೂರ್ತಿಯನ್ನು ತುಂಬಿ, ಉತ್ಸಾಹವನ್ನು ಹೆಚ್ಚಿಸುವುದಕ್ಕಾಗಿ, ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುವುದಕ್ಕಾಗಿ, ನಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದಕ್ಕಾಗಿ ಆಚರಿಸುವ ಸಂಪ್ರದಾಯಗಳು. ಎಲ್ಲರಿಗೂ ಶುಭವಾಗಲಿ.

ಆತ್ಮೀಯ ಸಹಕಾರಿ ಬಂಧುಗಳಿಗೆ 80ನೇ ಸ್ವಾತಂತ್ರ್ಯ ದಿನಾಚರಣೆಯ, ನಾಗರ ಪಂಚಮಿಯ, ಈದ್–ಮಿಲಾದ್ ಹಾಗೂ ಶ್ರೀ ವರಮಹಾಲಕ್ಷ್ಮೀ ಹಬ್ಬಗಳ ಶುಭ ಹಾರೈಕೆಗಳು. ಪ್ರತಿಯೊಂದು ಹಬ್ಬವೂ ನಮಗೆ ಹೆಚ್ಚಿನ ಸ್ಫೂರ್ತಿಯನ್ನು ತುಂಬಿ, ಉತ್ಸಾಹವನ್ನು ಹೆಚ್ಚಿಸುವುದಕ್ಕಾಗಿ, ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುವುದಕ್ಕಾಗಿ, ನಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದಕ್ಕಾಗಿ ಆಚರಿಸುವ ಸಂಪ್ರದಾಯಗಳು. ಎಲ್ಲರಿಗೂ ಶುಭವಾಗಲಿ.

ಕರ್ನಾಟಕದ ಸಹಕಾರ ಕ್ಷೇತ್ರದಲ್ಲಿ ಸೌಹಾರ್ದ ಚಳವಳಿಯು ಕೇವಲ ಆರ್ಥಿಕ ಚಟುವಟಿಕೆಯಾಗಿ ಉಳಿಯದೆ, ಸಾಮಾಜಿಕ ಬದಲಾವಣೆಯ ಶಕ್ತಿಯಾಗಿ ಬೆಳೆದಿದೆ. ಸದಸ್ಯರ ವಿಶ್ವಾಸ, ಪಾರದರ್ಶಕ ಆಡಳಿತ, ಸ್ವಾಯತ್ತತೆ ಮತ್ತು ಪರಸ್ಪರ ಸಹಕಾರದ ಮೌಲ್ಯಗಳನ್ನು ಆಧಾರವಾಗಿಸಿಕೊಂಡಿರುವ ಸೌಹಾರ್ದ ಸಹಕಾರಿಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತಿವೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಹಕಾರ ಸಂಸ್ಥೆಗಳು ಕೇವಲ ಸಾಲ ಮತ್ತು ಉಳಿತಾಯ ಸೇವೆಗಳಿಗೆ ಸೀಮಿತವಾಗದೆ, ಸದಸ್ಯರ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಬಲೀಕರಣಕ್ಕೆ ಕೇಂದ್ರಬಿಂದುವಾಗಬೇಕು. ಸ್ಥಳೀಯ ಸಂಪನ್ಮೂಲಗಳ ಸಮರ್ಪಕ ಬಳಕೆ, ಸ್ವಯಂ ಉದ್ಯೋಗ ಸೃಷ್ಟಿ, ಮಹಿಳಾ ಸಬಲೀಕರಣ ಮತ್ತು ಯುವಜನರ ಭಾಗವಹಿಸುವಿಕೆ ಮೂಲಕ ಸಹಕಾರಿ ವ್ಯವಸ್ಥೆಯು ಆತ್ಮನಿರ್ಭರ ಸಮಾಜ ನಿರ್ಮಾಣಕ್ಕೆ ಬಲವಾದ ಅಡಿಪಾಯ ಹಾಕಬಲ್ಲದು.

ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಅಧ್ಯಕ್ಷರು, ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಾಗಿ ಆಡಳಿತ ಪರಿಣಿತಿ, ವ್ಯವಹಾರ ಅಭಿವೃದ್ಧಿ, ಹಣಕಾಸು ಶಿಸ್ತು, ಉನ್ನತ ಮಟ್ಟದ ತರಬೇತಿ, ನಾಯಕತ್ವ ಅಭಿವೃದ್ಧಿ ಮುಂತಾದ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಸಹಕಾರಿಗಳಿಗೆ ತಲುಪುವಂತೆ ಜಿಲ್ಲಾ ಮಟ್ಟದ ಕ್ಲಸ್ಟರ್ ತರಬೇತಿ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ.

ಡಿಜಿಟಲ್ ಯುಗದಲ್ಲಿ ಸದಸ್ಯರು ವೇಗವಾದ, ಪಾರದರ್ಶಕ ಮತ್ತು ತಂತ್ರಜ್ಞಾನ ಆಧಾರಿತ ಸೇವೆಯನ್ನು ನಿರೀಕ್ಷಿಸುತ್ತಿದ್ದಾರೆ. ಆದ್ದರಿಂದ ಆನ್‌ಲೈನ್ ಸೇವೆಗಳು, ಮೊಬೈಲ್ ಬ್ಯಾಂಕಿಂಗ್, ಡಿಜಿಟಲ್ ದಾಖಲೆ ನಿರ್ವಹಣೆ ಮತ್ತು ಕೃತಕ ಬುದ್ಧಿಮತ್ತೆ (AI) ಆಧಾರಿತ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವುದು ಕಾಲದ ಅವಶ್ಯಕತೆಯಾಗಿದೆ.

ಸೌಹಾರ್ದ ಚಳವಳಿಯ ನಿಜವಾದ ಶಕ್ತಿ ಮಹಿಳೆಯರು ಮತ್ತು ಯುವಕರು. ಸ್ವಸಹಾಯ ಗುಂಪುಗಳು, ಉತ್ಪಾದಕ ಸಹಕಾರಿಗಳು, ಆಹಾರ ಸಂಸ್ಕರಣೆ, ಡಿಜಿಟಲ್ ಸೇವೆಗಳು ಮತ್ತು ಸ್ಟಾರ್ಟ್‌ಅಪ್ ಉದ್ಯಮಗಳ ಮೂಲಕ ಅವರು ಗ್ರಾಮೀಣ ಆರ್ಥಿಕತೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತಿದ್ದಾರೆ. ಮುಂದಿನ ಪೀಳಿಗೆಯ ಸಹಕಾರಿ ನಾಯಕತ್ವವನ್ನು ಬೆಳೆಸುವುದು ಇಂದಿನ ಪ್ರಮುಖ ಜವಾಬ್ದಾರಿಯಾಗಿದೆ.

ಸಹಕಾರವು ಕೇವಲ ಹಣಕಾಸಿನ ವ್ಯವಸ್ಥೆಯಲ್ಲ; ಅದು ಪರಸ್ಪರ ವಿಶ್ವಾಸ, ಸಮಾನ ಅವಕಾಶ, ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿಯ ಚಳವಳಿಯಾಗಿದೆ. ಜ್ಞಾನ, ತಂತ್ರಜ್ಞಾನ ಮತ್ತು ಮಾನವೀಯ ಮೌಲ್ಯಗಳ ಸಂಯೋಜನೆಯೊಂದಿಗೆ ಸೌಹಾರ್ದ ಸಹಕಾರಿಗಳು ಸ್ವಾವಲಂಬಿ ಕರ್ನಾಟಕ ನಿರ್ಮಾಣದ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಲಿವೆ ಎಂಬ ವಿಶ್ವಾಸ ನಮ್ಮದು.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ಸೂರ್ಯಕಾಂತ ರ್‍ಯಾಕಲೆ
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ ........ 2
ಸಂಪಾದಕೀಯ ........ 3
ಜ್ಞಾನ ಜ್ಯೋತಿ ........ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ 05–19
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 20–23
ನಿಮ್ಮ ಪ್ರಶ್ನೆ – ನಮ್ಮ ಉತ್ತರ ........ 24–24
**ಲೇಖನಗಳು :**
ಸಹಕಾರಿ ಸಂಸ್ಥೆಗಳಲ್ಲಿ ಹಣಕಾಸು ಆರೋಗ್ಯದ ಮೌಲ್ಯಮಾಪನ ........ 25–29
ಸಹಕಾರಿ ಸಂಸ್ಥೆಗಳಲ್ಲಿ ಆಡಳಿತಾಧಿಕಾರಿ ಮತ್ತು ವಿಶೇಷಾಧಿಕಾರಿ ನೇಮಕಾತಿ ........ 30–32

# ಸಂಪಾದಕೀಯ

## ಸಹಕಾರ ಸಂಸ್ಥೆಗಳ ಆಧುನೀಕರಣ, ಹೊಸ ಆವಿಷ್ಕಾರಗಳು ಹಾಗೂ ಯುವಕರಿಗೆ ಸಹಕಾರಿ ತತ್ವಗಳ ಅರಿವು ಮೂಡಿಸುವ ಗುರುತರ ಜವಾಬ್ದಾರಿ ಸಹಕಾರಿಗಳದ್ದು

ಅಪ್ಪ ಹಾಕಿದ ಆಲದ ಮರ ಅಂತೆ ಅದಕ್ಕೆ ನೇಣು ಹಾಕಿಕೊಂಡರೆ ಪ್ರಾಣ ಹೋಗೋದು ನಮ್ಮದೆ ಅನ್ನುವ ಅರಿವಿರಬೇಕು. ಹಳೆಯದು ಎಂದಿಗೂ ಬದಲಾಗುವುದಲ್ಲ. ಆದರೆ ಈಗ ಪ್ರತಿ ಕ್ಷಣ ಬದಲಾಗುತ್ತಿರುವ ಯುಗ. ನೂತನ ಅರ್ಥವ್ಯವಸ್ಥೆ, ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣಗಳ ಅತ್ಯಂತ ಹೆಚ್ಚಿನ ಮಟ್ಟದ ಪೈಪೋಟಿ ಯುಗದಲ್ಲಿ ಪ್ರತಿ ನಿಮಿಷದಲ್ಲೂ ಬದಲಾವಣೆಗಳು ಆಗುತ್ತಿರುವ ಹಿನ್ನೆಲೆಯಲ್ಲಿ ಸಹಕಾರಿ ವ್ಯವಸ್ಥೆಯಲ್ಲಿರುವ ನಾವುಗಳು ಆದ್ಯತೆಯ ಮೇಲೆ ಗಮನಿಸಬೇಕಾದ ಹಾಗೂ ಕ್ರಮವಿಡಬೇಕಿರುವ ಸಮಯ

ಸಹಕಾರಿ ಕ್ಷೇತ್ರದಲ್ಲಿ ಆಧುನಿಕತೆಯನ್ನು ಅಳವಡಿಸಿಕೊಳ್ಳುವುದು ಅನಿವಾರ್ಯ. ಇದು ಗಣಕೀಕರಣ ತಂತ್ರಜ್ಞಾನ ಯುಗವಾದ್ದರಿಂದ ಇದನ್ನು ಅಳವಡಿಸಿಕೊಳ್ಳುವ ಕ್ರಮ ಜರೂರಾಗಿ ಇಡಬೇಕು. ಆಧುನಿಕತೆಯ ಜೊತೆಗೆ ಹೊಸ ಹೊಸ ಆವಿಷ್ಕಾರ ಹಾಗೂ ಅನ್ವೇಷಣೆಗಳಲ್ಲಿ ಸಹಕಾರಿ ಆಡಳಿತ ಮಂಡಳಿ ಚಿಂತಿಸಿ ಕ್ರಮವಿಡಬೇಕು. ಸಾಂಪ್ರದಾಯಿಕ ಠೇವಣಿ ಸ್ವೀಕರಿಸುವುದು ಹಾಗೂ ಸಾಲ ನೀಡುವುದು ಅಷ್ಟೆ ಸಹಕಾರಿ ಸಂಘದ ಕೆಲಸವಾಗಿರುವುದಿಲ್ಲ. ಈ ಕ್ಷೇತ್ರ ಹಿಂದೆ ಕೇವಲ ಸೇವಾ ಕ್ಷೇತ್ರವಾಗಿತ್ತು. ಈಗ ಸೇವೆಯ ಜೊತೆಗೆ ಲಾಭವನ್ನು ಗಳಿಸುವುದು ಉತ್ತಮ ಆರ್ಥಿಕ ಸಂಘಟನೆಯಾಗಿ ಕಾರ್ಯನಿರ್ವಹಿಸಬೇಕಿದೆ. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಸಾಮಾನ್ಯ ಜನರ ಸದಸ್ಯರ ಆರ್ಥಿಕ ಅಭಿವೃದ್ಧಿಯ ಹಣಕಾಸಿನ ಕೇಂದ್ರವಾಗಿ ಕಾರ್ಯನಿರ್ವಹಿಸಬೇಕಿದೆ.

ಅತ್ಯಂತ ಮಹತ್ವದೇನೆಂದರೆ ಯುವಕರು ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು. ಕಳೆದ ಕೆಲವು ದಶಕಗಳಿಂದ ಸಹಕಾರ ಕ್ಷೇತ್ರವನ್ನು ಸಹಕಾರಿ ನಾಯಕತ್ವವನ್ನು ಅಧ್ಯಯನ ಮಾಡಿದಾಗ ಯುವಕರು ಈ ಕ್ಷೇತ್ರದಿಂದ ದೂರ ಉಳಿದಿದ್ದಾರೆ. ಈ ಕ್ಷೇತ್ರ ನಮಗೆ ಅಲ್ಲ. ಇದು ಕೇವಲ ಹಿರಿಯರಿಗೆ ಅವರಿಗೆ ಸಾಮಾಜಿಕ ಗೌರವವನ್ನು ಪಡೆದುಕೊಳ್ಳುವುದಕ್ಕಾಗಿ ಈ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಎಂಬ ಅಭಿಪ್ರಾಯವನ್ನು ಯುವಕರು ಹೊಂದಿದ್ದಾರೆ. ಅವರಲ್ಲಿರುವ ಈ ವಿಚಾರಧಾರೆಯನ್ನು ತೆಗೆದು ನೂತನ ವಿಚಾರಧಾರೆಗಳನ್ನು ತುಂಬಿಸುವ ಪ್ರಯತ್ನ ಆಗಬೇಕಿದೆ. ಸಹಕಾರಿ ಸಂಸ್ಥೆಗಳು ಉದ್ಯೋಗ ಕೇಂದ್ರಗಳು. ಸಹಕಾರಿ ಕ್ಷೇತ್ರದ ಮೂಲಕ ಯುವಕರು ಉದ್ಯೋಗ ದಾತರಾಗಲು ಸಾಧ್ಯವಿದೆ. ಕೈಗಾರಿಕೆಗಳನ್ನು ಸ್ಥಾಪಿಸಬಹುದು. ಸಹಕಾರಿ ಕ್ಷೇತ್ರದಿಂದ ಇದುವರೆಗೆ ವಿಶ್ವದ ವಿವಿಧ ಭಾಗಗಳಲ್ಲಿ ಆಗಿರುವ ಪ್ರಗತಿಯನ್ನು ಸಾಧನೆಗಳನ್ನು ಅವರಿಗೆ ಮಾಹಿತಿ ನೀಡುವುದರ ಜೊತೆಗೆ ಅವರು ಹೇಗೆ ತೊಡಗಿಸಿಕೊಳ್ಳಬಹುದು ಹೇಗೇ ವಿವಿಧ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಬಹುದು ಹೇಗೆ ಒಬ್ಬ ಸಹಕಾರಿ ಕೈಗಾರಿಕೋದ್ಯಮಿಯಾಗಿ ನೂರಾರು ಯುವರಿಗೆ ಉದ್ಯೋಗ ಒದಗಿಸಬಹುದು ಎಂಬ ಬಗ್ಗೆ ತಿಳುವಳಿಕೆ ನೀಡಬೇಕು.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

### "ಪ್ರಜ್ಞಾ"

ಪ್ರಾಪಂಚಿಕ ಅಥವಾ ಪಾರಮಾರ್ಥಿಕ ಜೀವನದಲ್ಲಿ ನಾವು ಏನನ್ನೇ ಸಾಧಿಸಬೇಕಾದರೂ ನಮ್ಮ ಮನಸ್ಸು ಸದೃಢವೂ ಸುನಿರ್ಮಲವೂ ಆಗಿರಬೇಕು. ಆಗ ನಮ್ಮ ಬದುಕಿನಲ್ಲಿ ಪರಮಾಶಾಂತಿಯು ನೆಲೆಸುತ್ತದೆ. ಜೀವನವು ಸಾರ್ಥಕವೆನಿಸುತ್ತದೆ. ಈ ಸತ್ಯ ಸಂಗತಿಯನ್ನು ನಮ್ಮ ಋಷಿ–ಮುನಿಗಳು, ಯೋಗಿಗಳು–ತತ್ತ್ವಜ್ಞಾನಿಗಳು ಸಾವಿರಾರು ವರುಷಗಳ ಹಿಂದೆಯೇ ಸಂಶೋಧಿಸಿದರು.

ಈ ಪ್ರಪಂಚದಲ್ಲಿ ಜನಿಸಿ ಬಂದವರಿಗೆಲ್ಲ ಬದುಕಲು ಬರುತ್ತದೆ ಎಂದಲ್ಲ ಅಥವಾ ಈಗ ಬದುಕುತ್ತಿರುವವರೆಲ್ಲರೂ ಚೆನ್ನಾಗಿ ಬದುಕುತ್ತಿದ್ದಾರೆ ಎಂದಲ್ಲ. ಬದುಕುವುದು ಒಂದು ಕಲೆಯಾಗಿದೆ. ನಮ್ಮ ಋಷಿ ಮುನಿಗಳು ನದಿಯ ದಡದ ಗುಡಿಸಲಿನಲ್ಲಿಯೇ ವಾಸವಾಗಿದ್ದರು. ಆಶ್ರಮವಾಸಿಗಳಾಗಿದ್ದ ಅವರ ಸರಳ ಸುಂದರ ಜೀವನ ಇಂದಿಗೂ ನಮಗೆಲ್ಲರಿಗೂ ಆದರ್ಶ. ಬದುಕುವ ಕಲೆ ಇದ್ದರೆ ಸಿರಿ–ಸಂಪದ ಏನೂ ಇರದಿದ್ದರೂ ನೆಮ್ಮದಿಯಿಂದ ಬದುಕಬಹುದು. ಬದುಕುವ ಕಲೆಯೇ ಇರದಿದ್ದರೆ ಏನೆಲ್ಲ ಸಿರಿ ಸಂಪದವಿದ್ದರೂ ಜೀವನದಲ್ಲಿ ನೆಮ್ಮದಿ ಇರುವುದಿಲ್ಲ.

ಜಪಾನ ದೇಶದ ಒಂದು ಜನಪದ ಕಥೆ, ಓರ್ವ ಆಗರ್ಭ ಸಿರವಂತೆ ಸಿರಿ–ಸಂಪತ್ತು, ಅಧಿಕಾರ–ಅಂತಸ್ತು, ಮಕ್ಕಳು–ಮರಿ ಯಾವುದಕ್ಕೆ ಏನು ಕೊರತೆ ಇರಲಿಲ್ಲ. ಒಂದು ದಿನ ಆ ಸಿರಿವಂತನು ಕುದುರೆಯನ್ನೇರಿ ಪ್ರವಾಸಕ್ಕೆ ಹೊರಟ. ಹತ್ತಾರು ಊರುಗಳನ್ನು ಸುತ್ತಾಡಿದ. ನಂತರ ತನ್ನ ಊರಿಗೆ ಮರಳುತ್ತಿದ್ದ. ಅರಣ್ಯದ ಮಾರ್ಗವಾಗಿ ಹೊರಟಿದ್ದ. ಮಾರ್ಗ ಮಧ್ಯದಲ್ಲಿ ಒಂದು ಸುಂದರವಾದ ಮೂರ್ತಿ ಬಿದ್ದಿರುವುದು ಕಂಡಿತು. ತಕ್ಷಣ ಕೆಳಗಿಳಿದು ನೋಡುತ್ತಾನೆ. ಅದು 40 ಕೆ.ಜಿ ತೂಕದ ಸುವರ್ಣದ ಮೂರ್ತಿಯಾಗಿತ್ತು. ಸಿರಿವಂತನ ಸಂತಸಕ್ಕೆ ಸೀಮೆಯೇ ಉಳಿಯಲಿಲ್ಲ ಕುಣಿದು ಕುಪ್ಪಳಿಸಿದ. ಮೂರ್ತಿಯನ್ನೆತ್ತಿಕೊಂಡು ಮನೆಗೆ ಬಂದ. ಆ ಚಿನ್ನದ ಮೂರ್ತಿಯನ್ನು ಮನೆಯವರ ಕೈಯಲ್ಲಿ ಕೊಟ್ಟ. ಮನೆಯವರಿಗೂ ಎಲ್ಲಿಲ್ಲದ ಸಂತೋಷವಾಯಿತು. ಸುತ್ತಮುತ್ತಲಿನವರೆಲ್ಲರೂ ನೋಡಲು ಬಂದು ನೆರೆದು. 'ಎಂಥ ಭಾಗ್ಯವಂತ–ರಿವರು!' ಎಂದು ಕೊಂಡಾಡಿದರು. ಮನೆಯವರಾದರೂ ಕೂಡಾ ಚಿನ್ನದಮೂರ್ತಿಯನ್ನು ನೋಡಲು ಬಂದವರಿಗೆಲ್ಲ ಸಂತಸದಿಮದ ಬರಮಾಡಿಕೊಮಡು ಊಪೋಪಚಾರ ಮಾಡಿಸಿದರು. ಮನೆಗೆ ಮನೆಯೇ ಹಬ್ಬದ ವಾತಾವರಣದಿಂದ ಸಂಭ್ರಮಿಸುತ್ತಿತ್ತು! ಆದರೆ ಆ ಚಿನ್ನದ ಮೂರ್ತಿಯನ್ನು ತಂದಿದ್ದ ಯಜಮಾನನು ಮೂಲೆ ಹಿಡಿದು ಮುಖ ಸಪ್ಪೆ ಮಡಿಕೊಂಡು ಕುಳಿತಿದ್ದ. ಯಾರೋ ಕೇಳಿದರು – "ಇಂಥ ಸಂತಸದ ಸಂದರ್ಭದಲ್ಲಿ ನೀನೀಕೆ ಹೀಗೆ ಮೂಲೆ ಹಿಡಿದು ಕುಳಿತಿರುವೆ?" ಯಜಮಾನ 'ನೀವೆಲ್ಲರೂ ದಡ್ಡರಿದ್ದೀರಿ. ಇದು ಸಂತಸದ ಕ್ಷಣವಲ್ಲ. ಅತ್ಯಂತ ದುಃಖದ ಕ್ಷಣ!" ಜನರು–"ಏಕೆ, ಇಂಥ ಅಮೌಲ್ಯವಾದ ಬಂಗಾರದ ಮೂರ್ತಿಯು ನಿಮಗೆ ದೊರೆತಿರುವುದು ಸಂತಸದ ಸಂಗತಿ ಅಲ್ಲವೆ?" ಯಜಮಾನ – "ಇದು ಸಂತಸದ ಸಂಗತಿ ಅಲ್ಲವೇ ಅಲ್ಲ"! ಜನರು– ಅದು ಹೇಗೆ ಹೇಳುತ್ತೀರಿ?" ಯಜಮಾನ – "ಆ ಮೂರ್ತಿಯ ಕೆಳಗೆ ಬರೆದಿರುವುದನ್ನ ಓದಿದರೆ ಗೊತ್ತಾಗುತ್ತದೆ. ಇದು ಎಂತ ದುಃಖದ ಕ್ಷಣವೆಂದು!

ಜನರೆಲ್ಲರೂ ಆ ಮೂರ್ತಿಯ ಕೆಳಗೆ ಏನು ಬರೆದಿದ್ದಾರೆಂದು ಕುತೂಹಲದಿಮದ ನೋಡಿದರು. ಅದರ ಕೆಳಗೆ 'ಇದು ಬುದ್ಧನ 14ನೇ ಚಿನ್ನದ ಮೂರ್ತಿ!" ಎಂದು ಬರೆದಿತ್ತು.

ಜನರು –"ಇದರಲ್ಲಿ ದುಃಖದ ಕಾರಣವೇನು ನಮಗೆ ಕಾಣುತ್ತಿಲ್ಲವಲ್ಲ!"

ಯಜಮಾನ – "ಅದಕ್ಕೇ ನಾನು ನಿಮ್ಮನ್ನು ದಡ್ಡರೆಂದು ಕರೆದದ್ದು ಇದು 14ನೇಯ ಚಿನ್ನದ ಮೂರ್ತಿ ನನಗೆ ಸಿಕ್ಕಿದೆ. ಹಾಗಾದರೆ ನಾನು ಇಂಥ ಹದಿಮೂರು ಚಿನ್ನದ ಮೂರ್ತಿಗಳನ್ನು ಕಳೆದುಕೊಂಡಂತಾಗಲಿಲ್ಲವೇ?" ಜನರಿಗೆ ಯಜಮಾನನ ಮಾತನ್ನು ಕೇಳಿ ನಗಬೇಕೋ ಅಲಬೇಕೋ ಏನು ತಿಳಿಯಲಿಲ್ಲ.

ಹೀಗೆ ಮನುಷ್ಯನು ಏನೆಲ್ಲ ಇದ್ದೂ ಬದುಕುವ ಕಲೆ ಇಲ್ಲದ್ದಕ್ಕೆ ದುಃಖಿಯಾಗಿದ್ದಾನೆ. ಇರುವುದರಲ್ಲಿ ಸಂತಸ ಪಡುವುದನ್ನು ಬಿಟ್ಟು ಇಲ್ಲದರ ಚಿಂತೆ ಮಾತುತ್ತ ಮರುಗುತ್ತಿದ್ದಾನೆ. ಇದರಿಂದ ಸ್ವರ್ಗಸದೃಶ್ಯವಾಗಬೇಕಾಗಿದ್ದ ಆತನ ಜೀವನವಿಂದು ನರಕಸದೃಶವಾಗಿದೆ. ಆದರೂ ಚಿಂತೆಯಿಲ್ಲ. ನಮ್ಮ ಜೀವನದಲ್ಲಿ ಸುಂದರಗೊಳಿಸುವುದು ಸ್ವರ್ಗಮಯಗೊಳಿಸುವುದು ನಮ್ಮ ಕೈಯೊಳಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಜುಲೈ–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 773 | 817 | 405 | 290 | 2285 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 142 | 91 | 62 | 84 | 379 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 160 | 116 | 85 | 98 | 459 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 755 | 792 | 382 | 276 | 2205 |
| **ಜುಲೈ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 379 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 459** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7586 | 1477 | 2333 | 835 | 12231 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1199 | 273 | 616 | 212 | 2300 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6387 | 1204 | 1717 | 623 | 9931 |
| **ಜುಲೈ 2026ರ ತಿಂಗಳಿನಲ್ಲಿ ಒಟ್ಟು 20 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

## ದಿನಾಂಕ 08 ಸೆಪ್ಟೆಂಬರ್ 2026, ಮಂಗಳವಾರ

ಮಾನ್ಯರೇ,

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 25ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 08 ಸೆಪ್ಟೆಂಬರ್ 2026, ಮಂಗಳವಾರದಂದು ರಾಯಲ್ ತ್ರಿಪುರವಾಸಿನಿ, ಗೇಟ್ ಸಂಖ್ಯೆ 02, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು-560080 ಇಲ್ಲಿ ಬೆಳಿಗ್ಗೆ 10:00 ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಮ್ಮ ಸಂಸ್ಥೆಯ ಅಧಿಕೃತ ಡೆಲಿಗೇಟ್ ಅವರು ಹಾಜರಾಗಬೇಕಾಗಿ ಕೋರಲಾಗಿದೆ.

**ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು:**

1. 25ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 24ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.
3. 2025-26ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.
4. 2025-26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.
5. 2025-26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.
6. 2025-26ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.
7. 2026-27ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ವೃತ್ತಿ ಶುಲ್ಕವನ್ನು ನಿಗದಿಪಡಿಸುವುದು.
8. 2027-28ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ವೃತ್ತಿ ಶುಲ್ಕವನ್ನು ನಿಗದಿಪಡಿಸುವುದು.
9. 2026-27ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
10. 2026-27ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
11. 2027-28ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
12. 2027-28ನೇ ಸಾಲಿನ ಕರಡು ಮುಂಗಡ ಪತ್ರವನ್ನು ಅನುಮೋದಿಸುವುದು.
13. ಮೈಸೂರಿನಲ್ಲಿರುವ ಸಂಯುಕ್ತ ಸಹಕಾರಿಯ ಸ್ವಂತ ನಿವೇಶನದಲ್ಲಿ ಮೈಸೂರು ಪ್ರಾಂತದ ಕಛೇರಿ ಹಾಗೂ ಕೈಗಾರಿಕಾ ಸಹಕಾರ ತರಬೇತಿ ಕೇಂದ್ರ ಕಟ್ಟಡ ನಿರ್ಮಿಸುವ ಕುರಿತು ಆಗಿರುವ ಬೆಳವಣಿಗೆಗಳ ಬಗ್ಗೆ.
14. ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) ಕೋರ್ಸಿನ ಕುರಿತು.
15. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ಕ್ಕೆ 2025ರಲ್ಲಿ ಆಗಿರುವ ತಿದ್ದುಪಡಿಗಳ ಕುರಿತು.
16. ಶ್ರೀ ಎಸ್.ಎಸ್.ಪಾಟೀಲ, ಮಾನ್ಯ ಮಾಜಿ ಸಹಕಾರ ಸಚಿವರು ಇವರ ಭಾವಚಿತ್ರವನ್ನು (Photo) ಎಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ಅಳವಡಿಸಿಕೊಳ್ಳುವ ಕುರಿತು.
17. "ಸೌಹಾರ್ದ" ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ (Souharda Research and Skill Development Training Centre) ನಿರ್ಮಾಣಕ್ಕೆ ಜಮೀನು ಖರೀದಿಸುವ ಕುರಿತು.
18. 2017-18 ರಿಂದ 2019-20ನೇ ಸಾಲಿನವರೆಗೆ ವಾರ್ಷಿಕ ವಂತಿಗೆಯ ಮೇಲಿನ ಜಿಎಸ್‌ಟಿ ಅನ್ನು ಪಾವತಿಸಿರದ ಸೌಹಾರ್ದ ಸಹಕಾರಿಗಳ ಕುರಿತು.
19. ಸಂಯುಕ್ತ ಸಹಕಾರಿಯು ಇತರೆ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ಕುರಿತು.
20. ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.

21. ಸೌಹಾರ್ದ ಸಹಕಾರಿ ಕಾಯ್ದೆ ಕಲಂ 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ.

    ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಸ್ಯಾಪ್-ಕೆ) ಇದರ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.
22. ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.
23. ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.
24. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.
25. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ.
26. ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.
27. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ಥಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ಥಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.
28. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.
29. ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಗಳ ನಿರ್ವಹಣೆಗೆ ಸಂಯುಕ್ತ ಸಹಕಾರಿಯಿಂದ ಮಾಡಲಾದ ಖರ್ಚು-ವೆಚ್ಚಗಳ ವಿವರಗಳನ್ನು ಪರಿಶೀಲಿಸಿ, ಅನುಮೋದಿಸುವ ಕುರಿತು.
30. ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.
31. ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.
32. 65ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.
33. ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.
34. ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.
35. ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.
36. ಸಂಯುಕ್ತ ಸಹಕಾರಿಯ ಸಿಬ್ಬಂದಿ ಸೇವಾ ನಿಯಮಗಳ ತಿದ್ದುಪಡಿ ಕುರಿತು.
37. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.
38. ಸಂಯುಕ್ತ ಸಹಕಾರಿಯ ಸಮಾಪನ.
39. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.
40. ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

**ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ,**

**ವಂದನೆಗಳೊಂದಿಗೆ,**

ಇಂತಿ ತಮ್ಮ ವಿಶ್ವಾಸಿ

Karnataka State Souharda Federal Cooperative Ltd. Reg. No. RSR / SOU / ACT / 136 / Regn 051 / 2001-02 dated 04-01-2002 Bangalore

(ಶರಣಗೌಡ ಜಿ. ಪಾಟೀಲ)

ವ್ಯವಸ್ಥಾಪಕ ನಿರ್ದೇಶಕ

ಸ್ಥಳ : ಬೆಂಗಳೂರು

ದಿನಾಂಕ : XX. XX. 2026

# ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ನಡೆದ ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮ



ಉದ್ಘಾಟನೆ



ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಹಕಾರಿಗಳು ಹಾಗೂ ಅಧಿಕಾರಿಗಳು

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ದಿನಾಂಕ 13 ಮತ್ತು 14 ಜುಲೈ 2026ರಂದು ಆಯೋಜಿಸಿದ್ದ ರಾಜ್ಯದ ಸೌಹಾರ್ದ ಸಹಕಾ–ರಿಗಳ ನಿರ್ದೇಶಕರುಗಳಿಗಾಗಿ 2ನೇ ತಂಡದ ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮನ್ನು ಸೌಹಾರ್ದ ಸಹಕಾರಿ ಸೌಧ ಮಲ್ಲೇಶ್ವರ ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

**ಸಾಮಾನ್ಯ ಸೇವಾ ಕೇಂದ್ರಗಳ ಅಳವಡಿಕೆಯಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿ :** ಶ್ರೀ ಶಕೀಬ್ ಅಹ್ಮದ್, ಮಾನ್ಯ ರಾಜ್ಯ ಮುಖ್ಯಸ್ಥರು, ಕಾಮನ್ ಸರ್ವೀಸ್ ಸೆಂಟರ್ ಬೆಂಗಳೂರು. ರಾಜ್ಯದಲ್ಲಿ ಹಲವಾರು ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ಸಾಮಾನ್ಯ ಸೇವಾ (ಸಿಎಸ್‌ಸಿ) ಕೇಂದ್ರಗಳು ಉತ್ತಮವಾದ ಸೇವೆಯನ್ನು ಒದಗಿಸುತ್ತಿದ್ದಾರೆ. ಸಿಎಸ್‌ಸಿ ಬಗ್ಗೆ ಸಿಬ್ಬಂದಿಗಳಿಗೆ ಉತ್ತಮ ತರಬೇತಿ ನೀಡಬೇಕು. ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಹಲವಾರು ಯೋಜನೆಗಳನ್ನು ಹೊಂದಿವೆ. ಗ್ರಾಹಕರಿಗೆ ಒಂದೇ ಸ್ಥಳದಲ್ಲಿ ಅನೇಕ ಸೇವೆಗಳನ್ನು ನೀಡಲು ಉತ್ತಮ ಅವಕಾಶವಾಗಿದೆ. ತಮ್ಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಇದೊಂದು ಆದಾಯದ ಮೂಲವಾಗಿದ್ದು. ತಮ್ಮ ಸಹಕಾರಿ ಸದಸ್ಯರುಗಳಿಗೆ & ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಸಹಾಯಕವಾಗಿದೆ. ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

**ಪ್ರದೇಶಕ್ಕೆ ತಕ್ಕಂತೆ ವ್ಯವಹಾರ :** ಶ್ರೀ ಜಿ. ನಂಜನಗೌಡ ಸಿ.ಎ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಇವರು ರಾಜ್ಯದ ಸೌಹಾರ್ದ ಸಹಕಾರಿಗಳಿಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು. ತರಬೇತಿ ಕಾರ್ಯಕ್ರಮದ ಪ್ರಯೋಜನಾ ಪಡೆದು ಕೊಂಡು ಜನರಿಗೆ ಉತ್ತಮವಾಗಿ ಸೇವೆ ಒದಗಿಸಬೇಕು ಆಯಾ ಪ್ರದೇಶ ಅನುಗುಣವಾಗಿ ವ್ಯವಹಾರಗಳನ್ನು ನಡೆಸಬೇಕು, ರೈತರಿಗೆ ಹಾಗೂ ಬಡವ–ರಿಗೆ ಉತ್ತಮ ಮತ್ತು ಪ್ರಾಮಾಣಿಕವಾದ ಸೇವೆಗಳನ್ನು ನೀಡಬೇಕು. ಸಂಸ್ಥೆಗಳ ಬೆಳವಣಿಗೆಗೆ ಪೂರಕವಾದ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಸದಾ ಸಂಸ್ಥೆಯ ಬೆಳವಣಿಗೆಗೆ ಶ್ರಮಿಸಬೇಕು ಎಂದು ಹೇಳಿದರು.

**ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳಬೇಕು :** ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳುವುದು ಅವಶ್ಯಕ ಹಾಗೂ ಎಐ ನಂತಹ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳಬೇಕು. ಹಾಗೂ ಸಿಎಸ್‌ಸಿ ಬಗ್ಗೆ ಉತ್ತಮ ತರಬೇತಿಗಳನ್ನು ಪಡೆದು ಹೆಚ್ಚಿನ ಸೇವೆಗಳನ್ನು ನೀಡೋಣ ಸೌಹಾರ್ದ ಸಹಕಾರ ಚಳುವಳಿ ಇನ್ನು ಉನ್ನತ ಮಟ್ಟಕ್ಕೆ ಬೆಳೆಸುವಂತ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಹೇಳಿದರು.

**ಸಂಸ್ಥೆಗಳಲ್ಲಿ ನಿರ್ದೇಶಕರ ಜವಾಬ್ದಾರಿ ಮಹತ್ವದು :** ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ರಾಜ್ಯದ ಸೌಹಾರ್ದ ಸಂಸ್ಥೆಗಳಲ್ಲಿ ನಿರ್ದೇಶಕರುಗಳು ಜವಾಬ್ದಾರಿ ಮಹತ್ವದಾಗಿರುತ್ತದೆ. ಸಂಸ್ಥೆಗಳಲ್ಲಿ ಸಿಬ್ಬಂದಿಯವರ ಕೆಲಸ ಹಾಗೂ ಗ್ರಾಹಕರ ಜೊತೆ ಉತ್ತಮ ಸಂಬಂಧ ಹೊಂದಿರಬೇಕು ಹಾಗೂ ಸಂಸ್ಥೆಯ ವಿವರ ಮತ್ತು ಮಾಹಿತಿಯನ್ನು ಹೊಂದಿರಬೇಕು ಸಂಸ್ಥೆಯ ಬೆಳವಣಿಗೆಯ ಬಗ್ಗೆ ಹೊಸ ಆಲೊಚನೆಗಳನ್ನು ಮತ್ತು ಯೋಜನೆಗಳನ್ನು ರೂಪಿಸಿ ಸಂಸ್ಥೆಯ ಪೂರಕ ಬೆಳವಣಿಗೆಗೆ ಆಸಕ್ತಿ ವಹಿಸಬೇಕು ಎಂದು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಎ.ಆರ್ ಪ್ರಸನ್ನಕುಮಾರ, ಮಾನ್ಯ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಶ್ರೀ ಬಿ.ಎಸ್. ಗುಂಡೂರಾವ್. ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಹಾಗೂ ಶ್ರೀ ರಂಜಿತ ಮಾನ್ಯ ಅಧಿಕಾರಿಗಳು ಕಾಮನ್ ಸರ್ವೀಸ್ ಸೆಂಟರ್, ಬೆಂಗಳೂರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಚ್ ಎಸ್ ನಾಗರಾಜಯ್ಯ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ) ಬೆಂಗಳೂರು. ಇವರು ಉಪಸ್ಥಿತರಿದ್ದರು.



ಕಾಮನ್ ಸರ್ವೀಸ್ ಸೆಂಟರ್‌ನ ಮಾನ್ಯ ರಾಜ್ಯ ಮುಖ್ಯಸ್ಥರಾದ ಶ್ರೀ ಶಕೀಬ್ ಅಹ್ಮದ್ ಇವರಿಗೆ ಸನ್ಮಾನ

**ಕಾರ್ಯಕ್ರಮದಲ್ಲಿ ಅಳವಡಿಸಿರುವ ವಿಷಯಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು :**

- ಅವಧಿ 01 – ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಮತ್ತು ನಿರ್ದೇಶಕರ ಪಾತ್ರ ಶ್ರೀ ಹೆಚ್.ಎಸ್. ನಾಗರಾಜಯ್ಯ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ.), ಬೆಂಗಳೂರು
- ಅವಧಿ 02– ಸಹಕಾರಿ ನಾಯಕತ್ವ ಡಾ. ನಂದೀಶ ವಿ. ಹಿರೇಮಠ ಮಾನ್ಯ ಪ್ರಾಧ್ಯಾಪಕರು & ಡೀನ್ ಸ್ಟ್ರಟಿಜಿಕ್ ಪಾರ್ಟ್ನರ್‌ಶಿಫ್ & ಕೊಲ್ಯಾಬರೇಷನ್ಸ್, ಈಬಿಎ ಮತ್ತು ಕಾರ್ಪೋರೇಟ್ ಟ್ರೇನರ್, ಬೆಂಗಳೂರು.
- ಅವಧಿ 03 – ಸೌಹಾರ್ದ ಸಹಕಾರಿಗಳಲ್ಲಿ ವ್ಯಾಪಾರ ಅಭಿವೃದ್ಧಿಯಲ್ಲಿ ನಿರ್ದೇಶಕರ ಪಾತ್ರ ಶ್ರೀ ಗುರುಸ್ವಾಮಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ.) ಬೆಂಗಳೂರು.
- ಅವಧಿ 04 – ತಂತ್ರಾಂಶ ದುರ್ಬಳಕೆ ತಡೆಗಟ್ಟುವಲ್ಲಿ ನಿರ್ದೇಶಕರ ಪಾತ್ರ ಶ್ರೀ ಜಗದೀಶ, ಮಾನ್ಯ ತರಬೇತುದಾರರು ಮಂಗಳೂರು.
- ಅವಧಿ 05 – ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಮಾನವೀಯ ಮೌಲ್ಯಗಳು ಶ್ರೀಮತಿ ಮೀನಾಕ್ಷಿ ಖಂಡಿಮಠ, ಮಾನ್ಯ ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ತುಮಕೂರು ವಿಶವಿದ್ಯಾಲಯ, ತುಮಕೂರು.



ಸಂವಾದ ಕಾರ್ಯಕ್ರಮ

**ಸಂವಾದ ಕಾರ್ಯಕ್ರಮ :**

**ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರೊಂದಿಗೆ ಸಂವಾದ ಕಾರ್ಯಕ್ರಮ :**

- ಶ್ರೀ ಜಿ ವೆಂಕಟೇಶ ಶಣೈ, ಮಾನ್ಯ ಅಧ್ಯಕ್ಷರು, ಗಂಗೋಳ್ಳಿ ಟೌನ್ ಸೌಹಾರ್ದ ಸಹಕಾರಿ ಸಂಘ ನಿ., ಕುಂದಾಪುರ
- ಶ್ರೀಮತಿ ಟಿ ಶರಣಮ್ಮ, ಮಾನ್ಯ ಅಧ್ಯಕ್ಷರು, ಕವಾಡ ದಾರಿದೀಪ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ.,ಆಲೂರು ಜಿ॥ ವಿಜಯನಗರ
- ಶ್ರೀ ಶಿವಶಂಕರ, ಮಾನ್ಯ ಅಧ್ಯಕ್ಷರು, ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ., ಶಿವಮೊಗ್ಗ
- ಶ್ರೀ ಉದಯ ಕುರ್ಡೆಕರ್, ಮಾನ್ಯ ಅಧ್ಯಕ್ಷರು, ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ. ಹಾವೇರಿ.

ಕಾರ್ಯಕ್ರಮದ ಸ್ವಾಗತವನ್ನು ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೂಗಾರ್ ನಡೆಸಿಕೊಟ್ಟರು. ಶ್ರೀಮತಿ ದಿವ್ಯ ಟಿ ಇವರು ಪ್ರಾರ್ಥಿಸಿದರು ಹಾಗೂ ನಿರೂಪಣೆಯನ್ನು ತರಬೇತಿ ವಿಭಾಗದ ಅಧಿಕಾರಿಯಾದ ಶ್ರೀಮತಿ ಕವಿತಾ ಆರ್ ಹಾಗೂ ವಂದನಾರ್ಪಣೆಯನ್ನು ಶ್ರೀ ಬಾಬು ಪಠಾಣ್ ತರಬೇತಿ ತರಬೇತಿ ಅಧಿಕಾರಿ ಇವರು ನಡೆಸಿಕೊಟ್ಟರು. ಈ ತರಬೇತಿ ಕಾರ್ಯಕ್ರಮದಲ್ಲಿ 62 ಸೌಹಾರ್ದಗಳಿಂದ 96 ಪ್ರತಿನಿಧಿಗಳು ಭಾಗವಹಿಸಿದ್ದರು.

## ಜುಲೈ 2026 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

### 1. ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ ಜುಲೈ ಮಾಹೆಯಲ್ಲಿ 07 ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಕಲಂ 38ಎ ರನ್ವಯ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ. 01) ಶ್ರೀ ಕಾಂಚನಗಂಗಾ ಸೌಹಾರ್ದ ಪತ್ತಿನ ಸಹಕಾರಿ ನಿ., ಲಿಂಗಸೂಗೂರು, ರಾಯಚೂರು 02) ನಾಗರತ್ನ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಬೆಂಗಳೂರು 03) ತುಳಸಿ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ 04) ಶಕ್ತಿ ಮಹಿಳಾ ಸ್ವ–ಸಹಾಯ ಸೌಹಾರ್ದ ಸಹಕಾರಿ ನಿ., ಮಂಡ್ಯ 05) ನೀಲಗಿರೀಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟ 06) ಕಲ್ಯಾಣ ಪ್ರಗತಿ ಸೌಹಾರ್ದ ಸಹಕಾರಿ ನಿ., ಯರನಾಳ, ವಿಜಯಪುರ 07) ಸುವರ್ಣ ಕರ್ನಾಟಕ ಸೌಹಾರ್ದ ಪತ್ತಿನ ಸಹಕಾರಿ ನಿ., ಶಹಾಪೂರ, ಯಾದಗಿರಿ.

# ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳ ವರದಿಗಳು



**ಮೈಸೂರು** : ದಿನಾಂಕ 16.07.2026 ರಂದು ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಯ ಸೌಹಾರ್ದ ಸಹಕಾ–ರಿಗಳೊಂದಿಗೆ "ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಶ್ರೀ ಗುರು ರೆಸಿಡೆನ್ಸಿ, ಜೆ.ಎಲ್.ಬಿ ರೋಡ್, ದೇವರಾಜ ಮೊಹಲ್ಲಾ, ಮೆಟ್ರೋಪೋಲ್ ಸರ್ಕಲ್ ಹತ್ತಿರ, ಮೈಸೂರು ನಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಯ 112 ಸೌಹಾರ್ದ ಸಹಕಾರಿಗಳಿಂದ 206 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿಕ್ಕಮಗಳೂರು** : ದಿನಾಂಕ 15–07–2026 ರಂದು ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ಸಂಪರ್ಕ ಸಭೆ ಕಾರ್ಯಕ್ರಮವನ್ನು ಹೋಟೆಲ್ ಆರ್ಕಿಡ್, ಐ.ಜಿ ರಸ್ತೆ, ಚಿಕ್ಕಮಗಳೂರು ಇಲ್ಲಿ ಹಮ್ಮಿಕೊಳ್ಳಲಾಯಿತು. ಈ ಸಂಪರ್ಕ ಸಭೆಯಲ್ಲಿ 37 ಸೌಹಾರ್ದ ಸಹಕಾರಿಗಳಿಂದ 50 ಜನ ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿ ಹಾಗೂ ಜಿಲ್ಲೆಯ ಪ್ರವರ್ತಕರು ಸೇರಿ ಒಟ್ಟು 60 ಜನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



**ಹಾಸನ** : ದಿನಾಂಕ 15–07–2026 ರಂದು ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ಸಂಪರ್ಕ ಸಭೆ ಕಾರ್ಯಕ್ರಮವನ್ನು ಹೋಟೆಲ್ ಜ್ಯುವೆಲ್ ರಾಕ್, ಬಿ.ಎಂ ರೋಡ್ ಹಾಸನ ಇಲ್ಲಿ ಹಮ್ಮಿಕೊಳ್ಳಲಾಯಿತು. ಈ ಸಂಪರ್ಕ ಸಭೆಯಲ್ಲಿ 48 ಸೌಹಾರ್ದ ಸಹಕಾರಿಗಳಿಂದ 85 ಜನ ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿ ಹಾಗೂ ಜಿಲ್ಲೆಯ ಪ್ರವರ್ತಕರು ಸೇರಿ ಒಟ್ಟು 90 ಜನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



**ದಕ್ಷಿಣ ಕನ್ನಡ** : ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 30/07/2026 ರ ಗುರುವಾರದಂದು ಹೋಟೆಲ್ ಶ್ರೀನಿವಾಸ, ಹಂಪನಕಟ್ಟೆ ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ 104 ಸೌಹಾರ್ದ ಸಹಕಾರಿಗಳಿಂದ 210 ಜನರು ಭಾಗವಹಿಸಿದ್ದರು.



**ಉಡುಪಿ** : ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಕರಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.07.2026 ಬೆಳಿಗ್ಗೆ 10.00 ಘಂಟೆಗೆ ಡಯಾನ ಹೋಟೆಲ್, ಉಡುಪಿ ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯ ನಿರ್ವಾಹಕರು ಸೇರಿ 117 ಸೌಹಾರ್ದ ಸಹಕಾರಿಗಳಿಂದ 203 ಪ್ರತಿನಿಧಿಗಳು ಭಾಗವಹಿಸಿದ್ದರು.



**ಶಿವಮೊಗ್ಗ** : ದಿನಾಂಕ 06.07.2026ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಶ್ರೀಮಾತಾ ಮಾಂಗಲ್ಯ ಮಂದಿರ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 60 ಸೌಹಾರ್ದ ಸಹಕಾರಿಗಳಿಂದ 165 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿತ್ರದುರ್ಗ** : ದಿನಾಂಕ 07.07.2026ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಹೋಟೆಲ್ ಐಶ್ವರ್ಯ ಪೋರ್ಟ್, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 44 ಸಹಕಾರಿಗಳಿಂದ 91 ಪ್ರತಿನಿಧಿಗಳು ಭಾಗವಹಿಸಿದ್ದರು.



**ದಾವಣಗೆರೆ** : ದಿನಾಂಕ 08.07.2026ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಗಿಹಾನ್ ಸಭಾಂಗಣ, ಶ್ರೀಗಂಧ ರೆಸಿಡೆನ್ಸಿ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 53 ಸಹಕಾರಿಗಳಿಂದ 122 ಪ್ರತಿನಿಧಿಗಳು ಭಾಗವಹಿಸಿದ್ದರು.



**ತುಮಕೂರು** : ದಿನಾಂಕ 09.07.2026ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಸ್ನೇಹ ಸಂಗಮ ಕನ್ವೆನ್ಷನ್ ಹಾಲ್ ಸಭಾಂಗಣ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 129 ಸಹಕಾರಿಗಳಿಂದ 252 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಂಗಳೂರು** : ದಿನಾಂಕ 13.07.2026ರಂದು ಬೆಂಗಳೂರು ನಗರದ 1&4ನೇ ವಲಯ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಕದಂಬ ಸಾಮ್ರಾಟ್, ರಾಜಾಜಿನಗರ, ಬೆಂಗಳೂರು ನಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 49 ಸಹಕಾರಿಗಳಿಂದ 101 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಂಗಳೂರು** : ದಿನಾಂಕ 14.07.2026ರಂದು ಬೆಂಗಳೂರು ನಗರದ 2&3ನೇ ವಲಯ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಉದಯ ಸೌಹಾರ್ದ ಸಹಕಾರಿ ಸಂಘ ನಿ, ಹನುಮಂತನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 95 ಸಹಕಾರಿಗಳಿಂದ 148 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೀದರ :** ದಿನಾಂಕ 01.07.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತದ ವತಿಯಿಂದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಆಡಳಿತ ಮಂಡಳಿ ಸದಸ್ಯರು/ ಮುಖ್ಯಕಾರ್ನಿರ್ವಾಹಕರುಗಳಿಗಾಗಿ ಸಾಮರ್ಥ್ಯ ತರಬೇತಿ ಕೇಂದ್ರ, ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ. ಇಲ್ಲಿ "ಸಂಪರ್ಕ ಸಭೆ"ಯನ್ನು ಹಮ್ಮಿಕೊಳ್ಳಲಾಗಿತ್ತು. ಸಂಪರ್ಕ ಸಭೆಯಲ್ಲಿ 62 ಸೌಹಾರ್ದ ಸಹಕಾರಿಗಳಿಂದ 121 ಪ್ರತಿನಿಧಿಗಳು ಉಪಸ್ಥಿತರಿದ್ದರು.



**ಕಲಬುರಗಿ :** ದಿನಾಂಕ 02.07.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತದ ವತಿಯಿಂದ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು /ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವೆಂಕಟಗಿರಿ ಹೋಟೆಲ್ ಹಳೆ ಜೆವರ್ಗಿ ರಸ್ತೆ ಕಲಬುರಗಿಯಲ್ಲಿ ಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಂಪರ್ಕ ಸಭೆಯಲ್ಲಿ 91 ಸೌಹಾರ್ದ ಸಹಕಾರಿಗಳಿಂದ 251 ಪ್ರತಿನಿಧಿಗಳು ಭಾಗವಹಿಸಿದರು.



**ಯಾದಗಿರಿ :** ದಿನಾಂಕ 02.07.2026 ರಂದು ಮಧ್ಯಾಹ್ನ 3:30 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ, ಹೋಟೆಲ್ ಮಾತೋಶ್ರೀ ಫ್ಯಾಮಿಲಿ ರೆಸ್ಟೋರೆಂಟ್, ಬಾಪುಗೌಡ ನಗರ, ಶಹಾಪುರದಲ್ಲಿ "ಸಂಪರ್ಕ ಸಭೆ"ಯನ್ನು ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 21 ಸೌಹಾರ್ದ ಸಹಕಾರಿಗಳಿಂದ ಒಟ್ಟು 46 ಪ್ರತಿನಿಧಿಗಳು ಭಾಗವಹಿಸಿದರು.



**ರಾಯಚೂರು :** ದಿನಾಂಕ.03.07.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತದ ವತಿಯಿಂದ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ, ಸಿಂಧನೂರಿನ ಕನಕದಾಸ ಕಲ್ಯಾಣ ಮಂಟಪದಲ್ಲಿ "ಸಂಪರ್ಕ ಸಭೆ" ಯನ್ನು ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 186 ಸೌಹಾರ್ದ ಸಹಕಾರಿಗಳಿಂದ 380 ಪ್ರತಿನಿಧಿಗಳು ಭಾಗವಹಿಸಿದರು.



**ಬಳ್ಳಾರಿ :** ದಿನಾಂಕ 23–07–2026 ರಂದು ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯನ್ನು ನಗರದ ಅತಿಥಿ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯಿಂದ 75 ಸೌಹಾರ್ದ ಸಹಕರಿಗಳಿಂದ 107 ಸೌಹಾರ್ದ ಸಹಕಾರಿಗಳು ಭಾಗವಹಿಸಿದರು.



**ಕೊಪ್ಪಳ :** ದಿನಾಂಕ 04.07.2026 ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ, ಸಂಪರ್ಕ ಸಭೆಯನ್ನು ಶಿವಶಾಂತವೀರ ಮಂಗಲ ಭವನ ಹೊಸಪೇಟೆ ರಸ್ತೆ ಕೊಪ್ಪಳ ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯಲ್ಲಿ 265 ಸೌಹಾರ್ದ ಸಹಕಾರಿಗಳಿಂದ 515 ಪ್ರತಿನಿಧಿಗಳು ಭಾಗವಹಿಸಿದರು.



**ಹಾವೇರಿ** : ದಿನಾಂಕ 24.07.2026ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆಯನ್ನು ವೈವಿಧ್ಯ ಹೋಟೆಲ್ ಹಾವೇರಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಜಿಲ್ಲೆಯ 84 ಸೌಹಾರ್ದ ಸಹಕಾರಿಗಳಿಂದ 141 ಪ್ರತಿನಿಧಿಗಳು ಭಾಗವಹಿಸಿದ್ದರು.



**ವಿಜಯಪುರ** : : ದಿನಾಂಕ 20.07.2026 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆಯನ್ನು ಹೋಟೆಲ್ ರಾಮಕೃಷ್ಣ ಪ್ಯಾಲೆಸ್, ಸದಾಶಿವನಗರ ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಒಟ್ಟು 235 ಸೌಹಾರ್ದ ಸಹಕಾ–ರಿಗಳಿಂದ 412 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬಾಗಲಕೋಟ** : ದಿನಾಂಕ 21.07.2026 ರಂದು ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸಂಪರ್ಕ ಸಭೆಯನ್ನು ಶ್ರೀ ಸಾಯಿ ಮಂದಿರ, ವಿದ್ಯಾಗಿರಿ, ಬಾಗಲಕೋಟನಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಜಿಲ್ಲೆಯ 273 ಸೌಹಾರ್ದ ಸಹಕಾರಿಗಳಿಂದ 512 ಪ್ರತಿನಿಧಿಗಳು ಭಾಗವಹಿಸಿದ್ದರು.



**ಉತ್ತರ ಕನ್ನಡ** : ದಿನಾಂಕ 27.07.2026ರ ಸೋಮವಾರದಂದು ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಸಂಪರ್ಕ ಸಭೆ" ಯನ್ನು ಮಂದಾರ ಎಲೈಟ್, ಕುಮಟಾ ಇಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಜಿಲ್ಲೆಯ 154 ಸೌಹಾರ್ದ ಸಹಕಾರಿಗಳಿಂದ 217 ಪ್ರತಿನಿಧಿಗಳು ಭಾಗವಹಿಸಿದ್ದರು.



**ಧಾರವಾಡ** : ದಿನಾಂಕ 28.072026ರ ಮಂಗಳವಾರದಂದು ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆಯನ್ನು ದಿ ಓಶಿಯನ್ ಪರ್ಲ್ ರೆಸಾರ್ಟ್ ರಾಯಪುರ, ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಜಿಲ್ಲೆಯ 92 ಸೌಹಾರ್ದ ಸಹಕಾ–ರಿಗಳಿಂದ 260 ಪ್ರತಿನಿಧಿಗಳು ಭಾಗವಹಿಸಿದ್ದರು.



**ಗದಗ:** ದಿನಾಂಕ 29 ಜುಲೈ 2026ರ ಬುಧವಾರದಂದು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆಯನ್ನು ಲಾಯನ್ಸ್ ಭವನ ಗಾಂಧಿ ಚೌಕ ಗದಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಜಿಲ್ಲೆಯ 40 ಸೌಹಾರ್ದ ಸಹಕಾರಿಗಳಿಂದ 98 ಪ್ರತಿನಿಧಿಗಳು ಭಾಗವಹಿಸಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ




**ಬೆಳಗಾವಿ:** ದಿನಾಂಕ 26.07.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಳಗಾವಿ ಪ್ರಾಂತ ಮತ್ತು ಅರಿಹಂತ ಸೌಹಾರ್ದ ಸಹಕಾರಿ ನಿಯಮಿತ ಹುಲ್ಲೋಳಿ ಇವರ ಸಂಯುಕ್ತ ಆಶ್ರಯದಲ್ಲಿ ಅರಿಹಂತ ಸೌಹಾರ್ದ ಸಹಕಾರಿ ನಿಯಮಿತ ಹುಲ್ಲೋಳಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ, ಸಲಹಾ ಸಮಿತಿ ಸದಸ್ಯರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ವಿಷಯಾಧಾರಿತ ತರಬೇತಿಯನ್ನು ಸಹಕಾರಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಮೊದಲನೇಯ ಅವಧಿಯಲ್ಲಿ ಶ್ರೀ ಶಶಿಧರ ಎಲೆ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಬೆಂಗಳೂರು ರವರು ಬಡ್ಡಿಯೇತರ ಆದಾಯ ಮತ್ತು ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಉಪನ್ಯಾಸ ನೀಡಿದರು. ಮಧ್ಯಾಹ್ನ ಅವಧಿಯಲ್ಲಿ ಶ್ರೀ ಶ್ರೀಶೈಲ ಯಡಳ್ಳಿ, ಉಪನ್ಯಾಸಕರು ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್ ರವರು ಸಿಬ್ಬಂದಿಗಳ ಕೌಶಲ್ಯ ಅಭಿವೃದ್ಧಿ ಕುರಿತು ಉಪನ್ಯಾಸ ನೀಡಿದರು ಮತ್ತು ಸಾಮಾನ್ಯ ಸೇವಾ ಕೇಂದ್ರದ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೃಷಭನಾಥ ಪರಪ್ಪನವರ ಇವರು ಮಾಹಿತಿ ನೀಡಿದರು. ಈ ತರಬೇತಿ ಕಾರ್ಯಾಗಾರದಲ್ಲಿ ಒಟ್ಟು 120 ಪ್ರತಿನಿಧಿಗಳು ಭಾಗವಹಿಸಿದ್ದರು.

## ನಷ್ಟದಲ್ಲಿರುವ ಸಹಕಾರಿಗಳಿಗೆ ವ್ಯವಹಾರ ಅಭಿವೃದ್ಧಿ ತರಬೇತಿ




**ಬಾಗಲಕೋಟ :** ದಿನಾಂಕ 03.07.2026 ರಂದು ಬಾಗಲಕೋಟ ಜಿಲ್ಲೆಯ ನಷ್ಟದಲ್ಲಿರುವ ಸಹಕಾರಿಗಳಿಗೆ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ಬಾಪೂಜಿ ಮಲ್ಟಿಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಸಭಾ ಭವನ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಎನ್ ಪಾಟೀಲ ಇವರು ನೇರವೇರಿಸಿದರು.

ಕಾರ್ಯಕ್ರಮದ ಮೊದಲನೆಯ ಅವಧಿಯಲ್ಲಿ ಶ್ರೀ ಎಸ್.ಆರ್.ಬಾಡಗಿ, ವಿಸ್ತರಣಾಧಿಕಾರಿಗಳು, ಸಹಕಾರ ಸಂಘಗಳ ಇಲಾಖೆ, ಬಾಗಲಕೋಟೆ ಇವರು ವ್ಯವಹಾರ ಅಭಿವೃದ್ಧಿ ಕುರಿತು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಸಹಕಾರಿಗಳ ಜೊತೆ ಸಮಾಲೋಚ ಸಭೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಅವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಟಾಸ್ಕ್ ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮ್ ಕೋಳಾಪ್ಪೆ ಇವರು ನಡೆಸಿದರು. ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಶೇಗುಣಸಿ ಇವರು ಕೋರಿದರು. ಕಾರ್ಯಕ್ರಮವನ್ನು ಶ್ರೀಮತಿ ರೇಷ್ಮಾ ಪಾಟೀಲ ನಿರೂಪಿಸಿ, ವಂದಿಸಿದರು. ತರಬೇತಿಯಲ್ಲಿ 105 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿ ಸಭೆ

**ಗದಗ :** ದಿನಾಂಕ 29.07.2026 ರಂದು ಗದಗ ಜಿಲ್ಲೆಯ ಶಿವಾ ಪತ್ತಿನ ಮಹಿಳಾ ಸೌಹಾರ್ದ ಸಹಕಾರಿಯ ಸಭೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ಅಧ್ಯಕ್ಷರಾದ ಜಿ.ನಂಜನಗೌಡ ಅವರ ಅಧ್ಯಕ್ಷತೆಯಲ್ಲಿ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರ ಸಮ್ಮುಖದಲಿ ಕರೆಯಲಾಗಿತ್ತು. ಸದರಿ ಸಭೆಯಲ್ಲಿ ಸಹಕಾರಿಯ ಪ್ರಸ್ತುತ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಟಾಸ್ಕ್ ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮ ಕೊಳಾಪ್ಪೆ ರವರು, ಸಹಕಾರಿಯ ಆಡಳಿತ ಮಂಡಳಿಯ ಉಪಸ್ಥಿತರಿದ್ದರು.

**ಧಾರವಾಡ :** ದಿನಾಂಕ 28.07.2026 ಬಸವ ಬಳಗ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಹುಬ್ಬಳ್ಳಿ ಸಹಕಾರಿಯ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಜಿ ನಂಜನಗೌಡ ಅವರ ಅಧ್ಯಕ್ಷತೆಯಲ್ಲಿ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರ ಸಮ್ಮುಖದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸಭೆಯನ್ನು ಕರೆಯಲಾಗಿತ್ತು. ಸದರಿ ಸಭೆಯಲ್ಲಿ ಸಹಕಾರಿಯ ಪ್ರಸ್ತುತ ಕಾರ್ಯಚಟುವಟಿಕೆಗಳ ಮತ್ತು ಚುನಾವಣೆ ಕುರಿತು ಚರ್ಚಿಸಿರು. ಈ ಸಂದರ್ಭದಲ್ಲಿ ಟಾಸ್ಕ್ ಫೋರ್ಸ್ ಅಧಿಕಾರಿ ಶ್ರೀ ಗಂಗಾರಾಮ ಕೊಳಾಪ್ಪೆ ರವರು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ಸೌಹಾರ್ದ ಸಹಕಾರಿ ಬ್ಯಾಂಕುಗಳ ಪರಿಕ್ಷಾರ್ಥ/ ನೂತನ ಸಿಬ್ಬಂದಿಗಳಿಗಾಗಿ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್
2. ಸೌಹಾರ್ದ ಸಹಕಾರಿಗಳ ಉನ್ನತ ಅಧಿಕಾರಿಗಳಿಗಾಗಿ 5 ದಿನಗಳ ಕಾರ್ಯಕ್ಷಮತೆ ತರಬೇತಿ
3. ಸಂಪನ್ಮೂಲ ವ್ಯಕ್ತಿಗಳ ಸಭೆ
4. ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ನಿರ್ವಹಿಸಿತ್ತಿರುವ ಸನ್ನದು ಲೆಕ್ಕಪರಿಶೋಧಕರುಗಳಿಗಾಗಿ ಲೆಕ್ಕಪರಿಶೋಧಕರ ಕಾರ್ಯಾಗಾರ
5. 8ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್

# ಕೇಂದ್ರ ಸಹಕಾರ ಸಚಿವಾಲಯ 5 ವರ್ಷ ಪೂರ್ಣಗೊಳ್ಳುತ್ತಿರುವ ಸುಸಂದರ್ಭದಲ್ಲಿ ರಾಜ್ಯದಾದ್ಯಂತ ಸಹಕಾರ ಸಪ್ತಾಹ ಆಚರಣೆ




**ಮಂಡ್ಯ :** ಕೇಂದ್ರ ಸಹಕಾರ ಸಚಿವಾಲಯವು ದಿನಾಂಕ 06.07.2026 ರಂದು ತನ್ನ ಸ್ಥಾಪನೆಯ 5 ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಸಹಕಾರಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ "ಗಿಡ ನೆಡವು ಕಾರ್ಯಕ್ರಮ"ವನ್ನು ದಿನಾಂಕ: 01.07.2026ರಂದು ಬೆಳಗ್ಗೆ 10.30ಕ್ಕೆ ಕರ್ನಾಟಕ ಪಬ್ಲಿಕ್ ಶಾಲೆ, ಪ್ರಾಥಮಿಕ ಶಾಲಾ ವಿಭಾಗ, ಅರ್ಕೇಶ್ವರ ನಗರ, ಮಂಡ್ಯ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಸೇರಿದಂತೆ ಒಟ್ಟು 22 ಜನ ಭಾಗವಹಿಸಿದ್ದರು.



**ಚಾಮರಾಜನಗರ :** ಕೇಂದ್ರ ಸಹಕಾರ ಸಚಿವಾಲಯವು ತನ್ನ ಸ್ಥಾಪನೆಯ 5 ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಸಹಕಾರಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ "ಗಿಡ ನೆಡವು ಕಾರ್ಯಕ್ರಮ"ವನ್ನು ದಿನಾಂಕ:02.07.2026ರಂದು ಸರ್ಕಾರಿ ಪ್ರಾಥಮಿಕ ಶಾಲೆ, ಪಿಡಬ್ಲ್ಯೂಡಿ ಕಾಲೋನಿ, ಚಾಮರಾಜನಗರ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಸೇರಿದಂತೆ ಒಟ್ಟು 26 ಜನ ಭಾಗವಹಿಸಿದ್ದರು.



**ಕೊಡಗು :** ಕೇಂದ್ರ ಸಹಕಾರ ಸಚಿವಾಲಯವು ತನ್ನ ಸ್ಥಾಪನೆಯ 5 ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಸಹಕಾರಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ ಗಿಡ ನೆಡುವ ಕಾರ್ಯಕ್ರಮವನ್ನು ದಿನಾಂಕ: 06 ಜುಲೈ 2026 ಸರ್ಕಾರಿ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಅವರಣ, ಮಡಿಕೇರಿ ಇಲ್ಲಿ ಆಯೋಜಿಸಲಾಗಿತ್ತು. ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರು ಸೇರಿದಂತೆ 33 ಜನ ಭಾಗವಹಿಸಿದ್ದರು.



**ಹಾಸನ :** ಕೇಂದ್ರ ಸಹಕಾರ ಸಚಿವಾಲಯವು ತನ್ನ ಸ್ಥಾಪನೆಯ 5 ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಸಹಕಾರಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ ಗಿಡ ನೆಡುವ ಕಾರ್ಯಕ್ರಮವನ್ನು ದಿನಾಂಕ: 04 ಜುಲೈ 2026 ಶನಿವಾರ ಪುಷ್ಪಗಿರಿ ಆಂಗ್ಲ ಮಾಧ್ಯಮ ಶಾಲೆ, 2ನೇ ಹಂತ, ವಿಜಯನಗರ, ಹಾಸನ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಗಿಡ ನೆಡುವ ಅಭಿಯಾನಕ್ಕೆ ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಇದರ ಅಧ್ಯಕ್ಷರಾದ ಶ್ರೀಯುತ ರಮೇಶ್ ಎಂ.ಕೆ ಇವರು ಚಾಲನೆ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಾಲಾ ಶಿಕ್ಷಕ ವೃಂದದವರು, ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರು/ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಮುಖ್ಯಕಾರ್ಯನಿರ್ವಾಹಕರು ಸೇರಿದಂತೆ 45 ಜನ ಭಾಗವಹಿಸಿದ್ದರು.




**ಚಿಕ್ಕಮಗಳೂರು** : ಕೇಂದ್ರ ಸಹಕಾರ ಸಚಿವಾಲಯವು ದಿನಾಂಕ 06.07.2026ರಂದು ತನ್ನ ಸ್ಥಾಪನೆಯ ಐದು ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ "ಗಿಡ ನೆಡುವ ಕಾರ್ಯಕ್ರಮ"ವನ್ನು ದಿನಾಂಕ: 06 ಜುಲೈ 2026 ರಂದು ಲಾಲ್ ಬಹದ್ದೂರ್ ಶಾಸ್ತ್ರಿ ಪ್ರೌಡಶಾಲೆ, ರತ್ನಗಿರಿ ರಸ್ತೆ, ಚಿಕ್ಕಮಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಣ ವೃಂದದವರು, ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರು/ಉಪಾಧ್ಯಕ್ಷರು,ನಿರ್ದೇಶಕರುಗಳು ಹಾಗೂ ಮುಖ್ಯಕಾರ್ಯನಿರ್ವಾಹಕರು ಸೇರಿದಂತೆ 45 ಜನ ಭಾಗವಹಿಸಿದ್ದರು.



**ದಕ್ಷಿಣ ಕನ್ನಡ** : ಕೇಂದ್ರ ಸಹಕಾರ ಸಚಿವಾಲಯವು ತನ್ನ ಸ್ಥಾಪನೆಯ 5 ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯ ವಾಕ್ಯದೊಂದಿಗೆ ದೇಶದಾದ್ಯಂತ "ಸಹಕಾರ ಸಪ್ತಾಹ"ವನ್ನು ಆಚರಿಸಲಾಗುತ್ತಿದೆ. ದಿನಾಂಕ 03.07.2026ರ ಶುಕ್ರವಾರ ಮಂಗಳೂರಿನ ಕಾಫಿಕಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಭಾರತಿ ಜಿ. ಭಟ್ ರವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತೀಯ ಅಧಿಕಾ–ರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ನುಡಿದರು.



**ಚಿಕ್ಕಬಳ್ಳಾಪುರ** : ಕೇಂದ್ರದಲ್ಲಿ ಸಹಕಾರ ಸಚಿವಾಲಯವು ರಚನೆಯಾಗಿ 5 ವರ್ಷಗಳು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯವಾಕ್ಯದೊಂದಿಗೆ ದಿನಾಂಕ 02 ಜುಲೈ 2026ರಂದು ಚಿಕ್ಕಬಳ್ಳಾಪುರ ಹಾಲು ಉತ್ಪಾದಕರ ತರಬೇತಿ ಶಿಬಿರ, ಎ.ಪಿ.ಎಂ.ಸಿ ಯಾರ್ಡ್, ಎಂ.ಜಿ. ರಸ್ತೆ, ಚಿಕ್ಕಬಳ್ಳಾಪುರ ಇಲ್ಲಿ ಆಧುನಿಕ ಕೃಷಿ ಪದ್ಧತಿ ಹಾಗೂ ಸಾವಯವ ಕೃಷಿ ಮಾಹಿತಿ ಜಾಗೃತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಹಾಗೂ ಇತರೆ ಸಹಕಾರಿಗಳ ಪ್ರತಿನಿಧಿಗಳು ಒಳಗೊಂಡಂತೆ 67 ಜನ ಭಾಗವಹಿಸಿದ್ದರು.



**ಉಡುಪಿ** : ಕೇಂದ್ರ ಸಹಕಾರ ಸಚಿವಾಲಯವು ದಿನಾಂಕ 06.07.2026ರಂದು ತನ್ನ ಸ್ಥಾಪನೆಯ ಐದು ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ, ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯ ವಾಕ್ಯದೊಂದಿಗೆ ಚಿಂತನ ಮಂಥನ ಕಾರ್ಯಕ್ರಮವನ್ನು ದಿನಾಂಕ 04.07.2026 ರಂದು ಬೆಳಿಗ್ಗೆ 10.00 ಗಂಟೆಗೆ ದೇವಕಿ ಕನ್ವೆನ್ಷನ್ ಹಾಲ್ ಹೆರೂರು, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ. ಇಲ್ಲಿ ಆಯೋಜನೆ ಮಾಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಸೌಹಾರ್ದ ಸಹಕಾರ ಸಂಸ್ಥೆಗಳಿಂದ 240 ಕ್ಕಿಂತ ಹೆಚ್ಚು ಸೌಹಾರ್ದ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಹಾಜರಾಗಿದ್ದರು.




**ಚಿತ್ರದುರ್ಗ** : ಕೇಂದ್ರದಲ್ಲಿ ಸಹಕಾರ ಸಚಿವಾಲಯವು ರಚನೆಯಾಗಿ 5 ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನಲೆಯಲ್ಲಿ "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯವಾಕ್ಯದೊಂದಿಗೆ ದಿನಾಂಕ 02 ಜುಲೈ 2026ರಂದು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ, ಚಿತ್ರದುರ್ಗ ಇದರ ತರಳುಬಾಲು ನಗರ ಶಾಖೆಯ ಆವರಣದಲ್ಲಿ ಬ್ಯಾಂಕ್‌ನ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರ ಸಾರಥ್ಯದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಸ್. ಆರ್. ಲಕ್ಷ್ಮೀಕಾಂತ ರೆಡ್ಡಿ ರವರು ಹಾಗೂ ಆಡಳಿತ ಮಂಡಲಿ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.



**ದಾವಣಗೆರೆ :** ಕೇಂದ್ರದಲ್ಲಿ ಸಹಕಾರ ಸಚಿವಾಲಯವು ರಚನೆಯಾಗಿ 5 ವರ್ಷಗಳು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ “ಸಹಕಾರದಿಂದ ಸಮೃದ್ಧಿ” ಎಂಬ ಧ್ಯೇಯವಾಕ್ಯದೊಂದಿಗೆ ದೇಶದಾದ್ಯಂತ ಸಹಕಾರ ಸಪ್ತಾಹವನ್ನು (Co-Operative Week) ಅನ್ನು ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ದಿನಾಂಕ 05 ಜುಲೈ 2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಹಾಗೂ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಇವರ ವತಿಯಿಂದ ಜಸ್ಟೀಸ್ ಕೆ.ಎಸ್. ಹೆಗ್ಡೆ ಚಾರಿಟೆಬಲ್ ಆಸ್ಪತ್ರೆ ಇದರ ನುರಿತ ವೈದ್ಯರ ಸಹಕಾರದೊಂದಿಗೆ ಹರಿಹರ ತಾಲೂಕಿನ ಮಲೆಬೆನ್ನೂರಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.



**ದಾವಣಗೆರೆ :** ಕೇಂದ್ರದಲ್ಲಿ ಸಹಕಾರ ಸಚಿವಾಲಯವು ರಚನೆಯಾಗಿ 5 ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನಲೆಯಲ್ಲಿ “ಸಹಕಾರದಿಂದ ಸಮೃದ್ಧಿ” ಎಂಬ ಧ್ಯೇಯವಾಕ್ಯದೊಂದಿಗೆ ದಿನಾಂಕ 04 ಜುಲೈ 2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಹಾಗೂ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಇವರ ವತಿಯಿಂದ ಜಸ್ಟೀಸ್ ಕೆ.ಎಸ್. ಹೆಗ್ಡೆ ಚಾರಿಟೆಬಲ್ ಆಸ್ಪತ್ರೆ ಇದರ ನುರಿತ ವೈದ್ಯರ ಸಹಕಾರದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.



**ಚಿತ್ರದುರ್ಗ :** ಕೇಂದ್ರದಲ್ಲಿ ಸಹಕಾರ ಸಚಿವಾಲಯವು ರಚನೆಯಾಗಿ 5 ವರ್ಷಗಳು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ “ಸಹಕಾರದಿಂದ ಸಮೃದ್ಧಿ” ಎಂಬ ಧ್ಯೇಯವಾಕ್ಯದೊಂದಿಗೆ ದೇಶದಾದ್ಯಂತ ಸಹಕಾರ ಸಪ್ತಾಹವನ್ನು (Co-Operative Week) ಅನ್ನು ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ದಿನಾಂಕ 02 ಜುಲೈ 2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಹಾಗೂ ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಇವರ ವತಿಯಿಂದ ಚಳ್ಳಕೆರೆ ತಾಲೂಕಿನ ಗಂಗೋತ್ರಿ ಸೌಹಾರ್ದ ಸಹಕಾರಿ ನಿಯಮಿತದ ಹತ್ತಿರದ ಪ್ರದೇಶದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಚಳ್ಳಕೆರೆ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರು ಒಳಗೊಂಡಂತೆ 40ಕ್ಕೂ ಹೆಚ್ಚು ಜನರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



**ವಿಜಯನಗರ :** ದಿನಾಂಕ.04.07.2026ರಂದು ಪ್ರಾಂತೀಯ ಕಛೇರಿ ಕಲಬುರಿಗಿ ಹಾಗೂ ಹರಪನಹಳ್ಳಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು ಹಾಗೂ ಹೆಚ್. ಪಿ.ಎಸ್ ಪದವಿ ಪೂರ್ವ ಕಾಲೇಜು ಹರಪನಹಳ್ಳಿ ಇವುಗಳ ಸಂಯುಕ್ತ ಆಶ್ರಯದಲ್ಲಿ. “ಸಹಕಾರ ಸಪ್ತಾಹದ ಅಂಗವಾಗಿ” ಯುವ ಜನರಿಗೆ ಸಹಕಾರ ವಿಷಯದ ಕುರಿತು ಸಂವಾದ ಹಾಗೂ ರಸ ಪ್ರಶ್ನೆ ಕಾರ್ಯಕ್ರಮವನ್ನು ಹೆಚ್. ಪಿ.ಎಸ್ ಪದವಿ ಪೂರ್ವ ಕಾಲೇಜು ಹರಪನಹಳ್ಳಿ ಇಲ್ಲಿ ಆಯೋಜಿಲಾಗಿತ್ತು. ಯುವ ಜನರಿಗೆ ಸಹಕಾರ ವಿಷಯದ ಕುರಿತು ಸಂವಾದ ಹಾಗೂ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಸಹಕಾರಿಗಳು, ಪೋಲಿಸ ಇಲಾಖೆಯ ಅಧಿಕಾರಿಗಳು, ಕಾಲೇಜಿನ ಅಧ್ಯಕ್ಷರು, ಪ್ರಾಂಶುಪಾಲರು, ವಿದ್ಯಾರ್ಥಿಗಳು ಸೇರಿ ಒಟ್ಟು 220 ಜನ ಭಾಗವಹಿಸಿದರು.



**ಹಾವೇರಿ:** ಕೇಂದ್ರ ಸಹಕಾರ ಸಚಿವಾಲಯ 5 ಐದು ವರ್ಷ ಪೂರ್ಣಗೊಳ್ಳುತ್ತಿರುವ ಸುಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತದ ವತಿಯಿಂದ ಹಾಗೂ ದೈವಜ್ಞ ಬ್ರಾಹ್ಮಣ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಸವಣೂರು ಇವರ ನೇತೃತ್ವದಲ್ಲಿ ‘ಸಹಕಾರದಿಂದ ಸಮೃದ್ಧಿ’ ಎಂಬ ಧ್ಯೇಯ ವಾಕ್ಯದೊಂದಿಗೆ ದಿನಾಂಕ 02.07.2026 ರಂದು ವಿದ್ಯಾಭಾರತಿ ಶಿಕ್ಷಣ ಸಂಸ್ಥೆ, ಇದರ ಆವರಣದಲ್ಲಿ ಸಸಿ ನೆಡುವ ಮೂಲಕ ಆಚರಿಸಲಾಯಿತು.



**ಬಳ್ಳಾರಿ :** ದಿನಾಂಕ 03.07.2026ರಂದು ಸಹಕಾರ ಸಪ್ತಾಹ ಅಂಗವಾಗಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತಿಯ ಕಛೇರಿ ಕಲಬುರಗಿ ಮತ್ತು ಬಳ್ಳಾರಿ ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ ಗಿಡ ನೆಡುವ ಕಾರ್ಯಕ್ರಮವನ್ನು ಸರ್ಕಾರಿ ಪ್ರೌಢಶಾಲೆ, ಸಿರಗುಪ್ಪ ಇಲ್ಲಿ ಆಯೋಜಿಸಲಾಗಿತ್ತು.

ಸಸಿ ನೆಡುವ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅಗ್ನಿಶಾಮಕ ಠಾಣೆ ಅಧಿಕಾರಿಗಳು, ಶಿಶು ಅಭಿವೃದ್ಧಿ ಅಧಿಕಾರಿಗಳು, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳು, ಸ್ಥಳೀಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ನಿರ್ದೇಶಕರು ಸಿಬ್ಬಂದಿ ವರ್ಗ ಹಾಗೂ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಸೇರಿ 50 ಜನ ಭಾಗವಹಿಸಿದರು.



**ವಿಜಯಪುರ :** ದಿನಾಂಕ 01.07.2026 ರಂದು ಕೇಂದ್ರ ಸಹಕಾರ ಸಚಿವಾಲಯ 5 ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ ಸಹಕಾರ ಸಪ್ತಾಹ ಆಚರಣೆಯ ಪ್ರಯುಕ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ವಿಜಯಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ವಿಜಯಪುರ ಹಾಗೂ ಶಾಂತಿನಿಕೇತನ ಶಿಕ್ಷಣ ಸಂಸ್ಥೆ, ವಿಜಯಪುರ ಇವರುಗಳ ಸಹಯೋಗದೊಂದಿಗೆ "ಸಹಕಾರ ವಿಚಾರ ಸಂಕೀರ್ಣ" ಕಾರ್ಯಕ್ರಮವನ್ನು ಶಾಂತಿನಿಕೇತನ ಕಾಲೇಜು ಭವನ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲೆಯ ಸೌಹಾರ್ದ ಸಹಕಾ–ರಿಗಳು ಮತ್ತು ಶಾಂತಿನಿಕೇತನ ಶಿಕ್ಷಣ ಸಂಸ್ಥೆಯ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 130 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಳಗಾವಿ :** ಕೇಂದ್ರ ಸಹಕಾರ ಸಚಿವಾಲಯ 5 ಐದು ವರ್ಷ ಪೂರ್ಣಗೊಳ್ಳುತ್ತಿರುವ ಸುಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತದ ವತಿಯಿಂದ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯ ವಾಕ್ಯದೊಂದಿಗೆ ದಿನಾಂಕ 02.07.2026 ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ಸಭಾ ಭವನ, ಬಸವೇಶ್ವರ ಸರ್ಕಲ್ ಚಿಕ್ಕೋಡಿಯಲ್ಲಿ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ "ರಸಪ್ರಶ್ನೆ ಕಾರ್ಯಕ್ರಮ" ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ 62 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

**ಉತ್ತರ ಕನ್ನಡ :** ಸಹಕಾರ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ದಿನಾಂಕ 02.07.2026 ರಂದು ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ಸಂಘ, ಕುಮಟಾ ಸಹಕಾರಿಯಲ್ಲಿ ಆಡಳಿತ ಮಂಡಳಿ ಸದಸ್ಯರನ್ನು ಒಳಗೊಂಡು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಸ್ವಚ್ಛತಾ ಕಾರ್ಯಕ್ರಮ ಕೈಗೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಹಕಾರಿ ಪದಾಧಿಕಾರಿಗಳು, ನಿರ್ದೇಶಕರು, ಸಿಬ್ಬಂದಿಗಳು, ಸಹಕಾರ ಯೂನಿಯನ್ ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷ ಎಮ್ ಜೆ ಮತ್ತು ಸಹಕಾರಿಯ ಸಿಬ್ಬಂದಿಗಳು ಹಾಜರಿದ್ದರು.

**ಹಾವೇರಿ :** ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 05 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯವಾಕ್ಯದೊಂದಿಗೆ ದಿನಾಂಕ 04.07.2026 ರಂದು ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ನವ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಶಿಗ್ಗಾಂವ ಇವರ ನೇತೃತ್ವದಲ್ಲಿ ಇವರ ಸಂಘದ ಆವರಣದಲ್ಲಿ ರೇಣುಕಾ ಕಣ್ಣಿನ ಆಸ್ಪತ್ರೆ, ಹಾವೇರಿ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರದ ಮೂಲಕ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ನವ ಕರ್ನಾಟಕ ಸಹಕಾರಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಧಾರವಾಡ:** ದಿನಾಂಕ 03.07.2026 ಶುಕ್ರವಾರದಂದು ಕೇಂದ್ರ ಸಹಕಾರ ಸಚಿವಾಲಯ 5 ಐದು ವರ್ಷ ಪೂರ್ಣಗೊಳ್ಳುತ್ತಿರುವ ಸುಸಂದರ್ಭದಲ್ಲಿ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯದೊಂದಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಹಾಗೂ ಸಹಕಾರ ಇಲಾಖೆ ಇವರ ನೇತೃತ್ವದೊಂದಿಗೆ ರೋಟರಿ ರಕ್ತ ಕೇಂದ್ರ ಧಾರವಾಡ, ಎಂ.ಎಂ ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಧಾರವಾಡ, ಯುನಿಟಿ ಆಸ್ಪತ್ರೆ ಧಾರವಾಡ ಇವರ ಸಂಯೋಗದೊಂದಿಗೆ ಆರೋಗ್ಯ ಹಾಗೂ ರಕ್ತದಾನ ಶಿಬಿರವನ್ನು ಕೇಂದ್ರ ಗ್ರಂಥಾಲಯ ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಒಟ್ಟು 250ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.



**ಬಾಗಲಕೋಟೆ :** ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 5 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಳಗಾವಿ ಪ್ರಾಂತದ ವತಿಯಿಂದ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯ ವಾಕ್ಯದೊಂದಿಗೆ ಬಾಗಲಕೋಟೆ ಜಿಲ್ಲೆಯಲ್ಲಿ ಸಹಕಾರ ಇಲಾಖೆ ಹಾಗೂ ಸಂಯುಕ್ತ ಸಹಕಾರಿಯ ವತಿಯಿಂದ ದಿನಾಂಕ: 03.07.2026 ರಂದು ಬಾಪೂಜಿ ಮಲ್ಟಿಸ್ಟೇಟ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಸಭಾ ಭವನ, ಬಾಗಲಕೋಟೆ ಇಲ್ಲಿ ಸಹಕಾರಿಗಳಿಗೆ "ಸೌಹಾರ್ದ ಕಾಯ್ದೆ ತಿದ್ದುಪಡಿ" ಅಂಶಗಳ ಕುರಿತು ಉಪನ್ಯಾಸ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 60 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾವೇರಿ :** ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 5 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯವಾಕ್ಯದೊಂದಿಗೆ ದಿನಾಂಕ 04.07.2026 ರಂದು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಹಿರೇಕೆರೂರು ತಾಲೂಕು ವಿದ್ಯಾವರ್ಧಕ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹಿರೇಕೆರೂರು ಇವರ ಆವರಣದಲ್ಲಿ "ಸಸಿ ನೆಡುವ ಕಾರ್ಯಕ್ರಮ" ಮತ್ತು "ಸಹಕಾರ ಕಾಯ್ದೆ" ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀಮತಿ ಮಂಗಳಾ, ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರೇಕೆರೂರು, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಹಿರೇಕೆರೂರು ತಾಲೂಕಿನ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಮತ್ತು 120 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



**ಬೆಳಗಾವಿ :** ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 05 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯ ವಾಕ್ಯದೊಂದಿಗೆ, ದಿನಾಂಕ 04.07.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಮತ್ತು ಸಹಕಾರ ಇಲಾಖೆ, ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್ ಮತ್ತು ಮಹಾವೀರ ಶಿಕ್ಷಣ ಸಂಸ್ಥೆ ಹುಕ್ಕೇರಿ ಇವರುಗಳ ಸಹಯೋಗದೊಂದಿಗೆ "ಸಹಕಾರ ವಿಚಾರ ಸಂಕೀರ್ಣ" ಕಾರ್ಯಕ್ರಮವನ್ನು ಮಹಾವೀರ ಕಾಲೇಜು ಭವನ, ಹುಕ್ಕೇರಿ ಇಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮಹಾವೀರ ಶಿಕ್ಷಣ ಸಂಸ್ಥೆಯ ಒಟ್ಟು 125 ವಿದ್ಯಾರ್ಥಿಗಳು ಭಾಗವಹಿಸಿದ್ದರು.



**ಗದಗ :** ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 05 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯ ವಾಕ್ಯದೊಂದಿಗೆ ದಿನಾಂಕ 06.07.2026 ರಂದು ಗದಗ ಜಿಲ್ಲೆಯ ಮರ್ಚಂಟ ಲಿಬರಲ್ ಕೋ–ಆಪ್ ಬ್ಯಾಂಕ್ ಲಿ., ಗದಗ ಇವರ ನೇತೃತ್ವದಲ್ಲಿ ಎ.ಐ.ಟೂಲ್ಸ ಮತ್ತು ಸೈಬರ್ ಸೆಕ್ಯೂರಿಟಿ ಕುರಿತು ಉಪನ್ಯಾಸದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂಧರ್ಭದಲ್ಲಿ ಸಹಕಾರಿ ಸಂಘಗಳು, ಸೌಹಾರ್ದ ಸಹಕಾರಿಗಳು, ಜಿಲ್ಲಾ ಯೂನಿಯನ್ ಬ್ಯಾಂಕ್ ಮತ್ತು ಕೆ.ಸಿ.ಸಿ. ಬ್ಯಾಂಕ್ ಸಿಬ್ಬಂದಿಗಳು ಭಾಗವಹಿಸಿದ್ದರು.



**ವಿಜಯಪುರ:** ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 05 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯ ವಾಕ್ಯದೊಂದಿಗೆ ದಿನಾಂಕ 03.07.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು, ವಿಜಯಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ವಿಜಯಪುರ ಹಾಗೂ ಪ್ರೇರಣಾ ಪಬ್ಲಿಕ್ ವಸತಿ ಶಾಲೆ, ಸಿಂದಗಿ ಇವರುಗಳ ಸಹಯೋಗದೊಂದಿಗೆ "ಸಸಿ ನೆಡುವ" ಕಾರ್ಯಕ್ರಮವನ್ನು ಸಿಂದಗಿ ನಗರದ ಪ್ರೇರಣ ಪಬ್ಲಿಕ್ ವಸತಿ ಶಾಲೆಯಲ್ಲಿ ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ ಸಿಂದಗಿ, ಆಲಮೇಲ, ದೇವರಹಿಪ್ಪರಗಿ ತಾಲೂಕಿನ ಸೌಹಾರ್ದ ಸಹಕಾರಿಗಳು ಮತ್ತು ಪ್ರೇರಣ ಪಬ್ಲಿಕ್ ವಸತಿ ಶಾಲೆಯ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 200ಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸಿದ್ದರು.



**ವಿಜಯಪುರ** : ಕೇಂದ್ರ ಸಹಕಾರ ಸಚಿವಾಲಯ ಸ್ಥಾಪನೆಯಾಗಿ 05 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯ ವಾಕ್ಯದೊಂದಿಗೆ ದಿನಾಂಕ 03.07.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ವಿಜಯಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ವಿಜಯಪುರ ಹಾಗೂ ತಾಳಿಕೋಟಿ ತಾಲ್ಲೂಕು ಸಹಕಾರಿಗಳ ಸಹಯೋಗದೊಂದಿಗೆ ವೀರಶೈವ ವಿದ್ಯಾವರ್ಧಕ ಸಂಘದ ಬಿ.ಎಡ್ ವಿದ್ಯಾರ್ಥಿಗಳಿಗೆ "ಸಹಕಾರ ಜಾಗೃತಿ ಸಭೆ" ಕಾರ್ಯಕ್ರಮವನ್ನು ವೀರಶೈವ ವಿದ್ಯಾವರ್ಧಕ ಸಂಘ ಎಸ್.ಕೆ. ಬಿ.ಎಡ್. ಕಾಲೇಜ್ ತಾಳಿಕೋಟಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸ್ಥಳೀಯ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿವಾಹಕರು ಹಾಗೂ ಬಿ.ಎಡ್. ಕಾಲೇಜ್ ವಿದ್ಯಾರ್ಥಿಗಳನ್ನು ಒಳಗೊಂಡಂತೆ 58 ಪ್ರತಿನಿಧಿಗಳು ಉಪಸ್ಥಿತರಿದ್ದರು.



**ಚಿಕ್ಕೋಡಿ** : 104ನೇ ಅಂತರಾಷ್ಟ್ರೀಯ ಸಹಕಾರ ದಿನ ಆಚರಣಾ ಕಾರ್ಯಕ್ರಮವು ದಿನಾಂಕ 04/07/2026 ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಚಿಕ್ಕೋಡಿಯ ಸಭಾಭವನದಲ್ಲಿ ಜರುಗಿತು, ಈ ಆಚರಣಾ ಕಾರ್ಯಕ್ರಮದಲ್ಲಿ ಸಹಕಾರಿಯ ಸಂಸ್ಥಾಪಕರ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಜಗದೀಶ ಎಮ್ ಕವಟಗಿಮಠ ಹಾಗೂ ಶ್ರೀ ಸಾಯಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ಹಾಗೂ ನಿರ್ದೇಶಕರುಗಳಾದ ಶ್ರೀ ಸಂಜಯ ಗಿಡವೀರ, ಶ್ರೀ ಚಿದಾನಂದ ಹಿರೇಮಠ, ಶ್ರೀ ರಮೇಶ ಕುಡತರಕರ, ಶ್ರೀ ಮನೋಜ-ಕುಮಾರ ಸಮ್ಮದಶೆಟ್ಟಿ, ಶ್ರೀ ಲೋಕಪ್ಪಾ ದುಂಬಾಳಿ, ಶ್ರೀ ಮಹಾಂತೇಶ ಕವಲಾಪೂರೆ, ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸತೀಶ ಪಾಟೀಲ ಮತ್ತು ಸಹಕಾರಿಯ ಪ್ರಧಾನ ಕಛೇರಿಯ ಸಿಬ್ಬಂದಿಯವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆಚರಣೆ ಯಶಸ್ವಿಯಾಗಿ ಜರುಗಿತು.



**ಕೊಡಗು** : ಕೊಡಗು ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 06.07.2026 ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಕೊಡವ ಎಂಟರ್ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಕೊಡವ ಸಮಾಜ ಕಾಂಪ್ಲೆಕ್ಸ್, ಮುಖ್ಯ ರಸ್ತೆ, ಮಡಿಕೇರಿ ಇಲ್ಲಿ ಆಯೋಜಿಸಲಾಗಿತ್ತು.

ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರು ಸೇರಿದಂತೆ 20 ಜನ ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ದಾವಾ ದಾಖಲಾತಿ ವಿಧಾನಗಳು ಮತ್ತು ದಾಖಲಾತಿ ನಿರ್ವಹಣೆ " ಈ ವಿಷಯದ ಕುರಿತು ಉಪನ್ಯಾಸವನ್ನು ಶ್ರೀ ಬಲರಾಮ್ ಇವರು ಉಪನ್ಯಾಸ ನೀಡಿದರು.

ದ್ವಿತೀಯ ಅವಧಿಯಲ್ಲಿ ಸಹಕಾರಿಯಲ್ಲಿ "ಸಂಯುಕ್ತ ಸಹಕಾರಿಯ ಪರಿಷ್ಕೃತ ಸುತ್ತೋಲೆಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಉಪನ್ಯಾಸ ನೀಡಿದರು.



**ನಾಗಮಂಗಲ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಪಾಂಡವಪುರ, ಕೆ.ಆರ್ ಪೇಟೆ, ಶ್ರೀರಂಗಪಟ್ಟಣ ಮತ್ತು ನಾಗಮಂಗಲ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ "ಕ್ಲಸ್ಟರ್ ಮಟ್ಟದ ತರಬೇತಿ"ಕಾರ್ಯಕ್ರಮವನ್ನುದಿನಾಂಕ:25.07.2026ರಂದು "ಹೋಟೆಲ್ ಎಂ.ಎನ್.ಸಿ ಕಂಫರ್ಟ್, 1ನೇ ಮಹಡಿ, ಮೈಸೂರು ರಸ್ತೆ, ನಾಗಮಂಗಲ ತಾಲೂಕು ಮಂಡ್ಯ ಜಿಲ್ಲೆ ಇಲ್ಲಿನ ಸಭಾಂಗಣದಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು.

ಈ ಕಾರ್ಯಾಗಾರದ ಮೊದಲನೇ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳಲ್ಲಿ "ನಿರ್ದೇಶಕರುಗಳು ಹಕ್ಕು ಮತ್ತು ಜವಾಬ್ದಾರಿಗಳ" ಕುರಿತು ಶ್ರೀ ಹೆಚ್ ಆರ್ ನಾಗಭೂಷಣ್, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಪಾಂಡವಪುರ ಉಪವಿಭಾಗ, ಇವರು ಉಪನ್ಯಾಸ ನೀಡಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 11 ಸೌಹಾರ್ದ ಸಹಕಾ-ರಿಗಳಿಂದ 34 ಪ್ರತಿನಿಧಿಗಳು ಭಾಗವಹಿಸಿದ್ದರು.

## ಉದ್ಘಾಟನೆ



**ಮಂಗಳೂರು** : ಪುತ್ತೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿ ರಾಜ್ಯಾದ್ಯಂತ 21 ಶಾಖೆಗಳ ಮೂಲಕ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಿತ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ 22ನೇ ಶಾಖೆ ಉಳ್ಳಾಲದ ನಿಕ್ಸೋನ್ಸ್ ಪ್ಲಾಜಾದಲ್ಲಿ ಜು. 15ರಂದು ಉದ್ಘಾಟನೆಯಾಯಿತು.

ಶಾಖೆ ಉದ್ಘಾಟಿಸಿ ಮಾತನಾಡಿದ ವಾಣಿಜ್ಯ ಮತ್ತು ಕೈಗಾ–ರಿಕಾ ಇಲಾಖೆಯ ಮಂಗಳೂರು ಜಂಟಿ ನಿರ್ದೇಶಕ ಗೋಕುಲದಾಸ್ ನಾಯಕ್, ಪುತ್ತೂರಿನಲ್ಲಿ ಆರಂಭವಾದ ಈ ಸಂಘವು ರಾಜ್ಯಾದ್ಯಂತ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡು 22ನೇ ಶಾಖೆಯನ್ನು ಆರಂಭಿಸಿರುವುದು ಶ್ಲಾಘನೀಯ ಸಾಧನೆಯಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಶಾಖೆಗಳ ಸಂಖ್ಯೆ 25ಕ್ಕೆ ಏರಲಿ ಎಂಬ ಆಶಯ ವ್ಯಕ್ತಪಡಿಸಿದ ಅವರು, ಕಳೆದ 25 ವರ್ಷಗಳಿಂದ ಸಹಕಾರ ರತ್ನ ಎಸ್. ಆರ್. ಸತೀಶ್ಚಂದ್ರ ಅವರ ಸಮರ್ಥ ನೇತೃತ್ವದಲ್ಲಿ ಸಂಘವು ನಿರಂತರ ಪ್ರಗತಿ ಸಾಧಿಸಿದ್ದು, ಇನ್ನಷ್ಟು ಅಭಿವೃದ್ಧಿ ಹೊಂದಿ ಹೆಚ್ಚಿನ ವ್ಯವಹಾರ ದಾಖಲಿಸಲಿ ಎಂದು ಶುಭ ಹಾರೈಸಿದರು.

ಉಳ್ಳಾಲ ನಗರಸಭೆಯ ಪೌರಾಯುಕ್ತ ಸಂತೋಷ್ ಎಸ್.ಡಿ. ಮಾತನಾಡಿ, ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು ಶೀಘ್ರದಲ್ಲೇ 100 ಶಾಖೆಗಳನ್ನು ಸ್ಥಾಪಿಸುವಂತಾಗಲಿ. ಈಗಾಗಲೇ 800 ಕೋಟಿ ರೂ. ಗೂ ಅಧಿಕ ವ್ಯವಹಾರ ನಡೆಸಿರುವ ಸಂಘವು ಮುಂದಿನ ದಿನಗಳಲ್ಲಿ ಸಾವಿರಾರು ಕೋಟಿ ರೂ.ಗಳ ವ್ಯವಹಾರ ದಾಖಲಿಸುವ ಜೊತೆಗೆ ಸಾರ್ವಜನಿಕರ ಆರ್ಥಿಕ ಹಾಗೂ ಸಾಮಾಜಿಕ ಜೀವನಮಟ್ಟ ಸುಧಾರಣೆಗೆ ಇನ್ನಷ್ಟು ಕೊಡುಗೆ ನೀಡಲಿ ಎಂದು ಶುಭ ಹಾರೈಸಿದರು.

ತೊಕ್ಕೊಟ್ಟು ಪೆರ್ಮನ್ನೂರಿನ ಸಂತ ಸೆಬಾಸ್ಟಿಯನ್ ಚರ್ಚ್ ಧರ್ಮಗುರು ವಂ. ಫಾ. ಆಂಡ್ರೂ ಲಿಯೋ ಡಿಸೋಜ ಮಾತನಾಡಿ, ಧರ್ಮ, ಜಾತಿಭೇದವಿಲ್ಲದೆ ಎಲ್ಲ ಸಮುದಾಯಗಳ ಸಹಕಾರ ಈ ಸಂಘಕ್ಕೆ ದೊರೆಯುತ್ತಿದೆ. ರಜತ ಮಹೋತ್ಸವದ ಸಂಭ್ರಮದಲ್ಲಿರುವ ಸಂಘವು ಶೀಘ್ರದಲ್ಲೇ 25 ಶಾಖೆಗಳನ್ನು ಹೊಂದಿ ಇನ್ನಷ್ಟು ಪ್ರಗತಿ ಸಾಧಿಸಲಿ ಎಂದು ಶುಭ ಹಾರೈಸಿದರು.

ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿ ಪಾಂಡುರಂಗ ನಾಯಕ್ ಮಾತನಾಡಿ, ಯಾವುದೇ ಸಂಸ್ಥೆಯ ಯಶಸ್ಸಿಗೆ ಸಮರ್ಥ ಆಡಳಿತ ಮಂಡಳಿ ಹಾಗೂ ಸಮರ್ಪಣಾಭಾವದಿಂದ ಕಾರ್ಯನಿರ್ವಹಿಸುವ ಸಿಬ್ಬಂದಿಯೇ ಪ್ರಮುಖ ಆಧಾರ. ಈ ಎರಡೂ ಗುಣಗಳನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಹೊಂದಿದ್ದು, ಉಳ್ಳಾಲ ಹಾಗೂ ಸುತ್ತಮುತ್ತಲಿನ ಜನರು ಸಂಸ್ಥೆಗೆ ಉತ್ತಮ ಸಹಕಾರ ನೀಡುವ ವಿಶ್ವಾಸವಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷ ಸಹಕಾರ ರತ್ನ ಎಸ್.ಆರ್. ಸತೀಶ್ಚಂದ್ರ, ರಾಣಿ ಅಬ್ಬಕ್ಕಳ ನಾಡಿನಲ್ಲಿ ಸಂಘದ 22ನೇ ಶಾಖೆ ಆರಂಭವಾಗಿರುವುದು ಸಂತಸದ ಸಂಗತಿಯಾಗಿದೆ ಎಂದರು.

ಸಂಘವು 800 ಕೋಟಿ ರೂ.ಗೂ ಅಧಿಕ ವ್ಯವಹಾರ ದಾಖಲಿಸಿರುವುದು ಹೆಮ್ಮೆಯ ವಿಷಯವಾಗಿದ್ದು, ಸಿಬ್ಬಂದಿಯ ನಿಷ್ಠಾವಂತ ಸೇವೆಯಿಂದ ಈ ಬೆಳವಣಿಗೆ ಸಾಧ್ಯವಾಗಿದೆ ಎಂದು ಹೇಳಿದರು.

ರಾಜ್ಯದಲ್ಲೇ ಮೊಟ್ಟಮೊದಲ ಬಾರಿಗೆ ಸಹಕಾರಿ ಕ್ಷೇತ್ರದಲ್ಲಿ ಇ–ಸ್ಟ್ಯಾಂಪಿಂಗ್ ವ್ಯವಸ್ಥೆ ಜಾರಿಗೆ ತಂದ ಹೆಗ್ಗಳಿಕೆ ನಮ್ಮ ಸಂಘಕ್ಕಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಹಾಗೂ ರಾಜ್ಯದ ಒಂಭತ್ತನೇ ಸಹಕಾರಿ ಸಂಘವಾಗಿ ಹಲವು ವಿನೂತನ ಸೇವೆಗಳನ್ನು ನೀಡುತ್ತಿರುವ ಸಂಘವು ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತಾರವಾಗಿ ಬೆಳೆಯಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸಂಘದ ಮಾಜಿ ಪ್ರಧಾನ ವ್ಯವಸ್ಥಾಪಕ ಎಸ್.ಆರ್. ನಾಯಕ್ ಉಪಸ್ಥಿತರಿದ್ದರು. ಸಂಘದ ಸಿಬ್ಬಂದಿಗಳಾದ ಆಕಾಶ್ ಮತ್ತು ಸಂದೀಪ್ ಪ್ರಾರ್ಥಿಸಿದರು. ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯಕ್ರಮ ಸಂಯೋಜಕ ಬಿಪಿನ್‌ಚಂದ್ರ ಬಿ.ಡಿ. ವಂದಿಸಿದರು. ಮಂಗಳೂರು ಶಾಖೆಯ ಹಿರಿಯ ವ್ಯವಸ್ಥಾಪಕ ಪ್ರೇಮಚಂದ್ರ ನಾಯಕ್ ಕಾರ್ಯಕ್ರಮ ನಿರೂಪಿಸಿದರು.

ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ನಾಯಕ್ ಎ., ಸಹಕಾರಿಯ ನಿರ್ದೇಶಕರು, ಉಳ್ಳಾಲ ಶಾಖೆಯ ವ್ಯವಸ್ಥಾಪಕರಾದ ಶ್ರೀ ಪ್ರಶಾಂತ್ ಕೆ., ಸಹಕಾರಿಯ ಸದಸ್ಯರು ಹಾಗೂ ಹಿತೈಷಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶೀಘ್ರದಲ್ಲೇ ಸಹಕಾರಿಯ 23ನೇ ಶಾಖೆ ಬಂಟ್ವಾಳ ತಾಲೂಕಿನ ಸಿದ್ಧಕಟ್ಟೆಯಲ್ಲಿ ಶುಭಾರಂಭಗೊಳ್ಳಲಿದೆ.



## ವಾರ್ಷಿಕ ಸಾಮಾನ್ಯ ಸಭೆ

**ಶಿವಮೊಗ್ಗ** : ದಿನಾಂಕ 12/07/2026ರಂದು ಶ್ರೀಮಾತಾ ಮಾಂಗಲ್ಯ ಮಂದಿರದಲ್ಲಿ ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಇದರ 21ನೇ ವಾರ್ಷಿಕ ಮಹಾಸಭೆ ನಡೆಸಯಾಯಿತು.



**ದಕ್ಷಿಣ ಕನ್ನಡ :** ಮಂಗಳೂರಿನ ಮೀರಾಕಲ್ಸ್ ಆಫ್ ಮೀಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ಇದರ 6ನೇ ವರ್ಷದ ವಾರ್ಷಿಕೋತ್ಸವ ದಿನಾಂಕ 08.07.2026ರಂದು ಆಚರಿಸಲಾಯಿತ್ತು, ಇದರ ಪ್ರಯುಕ್ತ ದಿನಾಂಕ 10.07.2026 ರಂದು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯ ರೋಗಿಗಳಿಗೆ ಆಹಾರ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳಲಾಯಿತ್ತು. ಸದರಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಇದರ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದರು ಮತ್ತು ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಮೊಹಮ್ಮದ್ ಇಕ್ಬಾಲ್ ಶೇಖ್ ಹಾಗೂ ಸಹಕಾರಿಯ ಎಲ್ಲಾ ಸಿಬ್ಬಂದಿಗಳು ಭಾಗವಹಿಸಿದರು.



**ತುಮಕೂರು :** ದಿನಾಂಕ 09.07.2026ರಂದು ಸಂಯುಕ್ತ ಸಹಕಾರಿಯ ಮನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ತುಮಕೂರು ಸಿಟಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ, ತುಮಕೂರು ಸಹಕಾರಿಗೆ ಸಾಮಾನ್ಯ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು. ಸಹಕಾ–ರಿಯ ಅಧ್ಯಕ್ಷರಾದ ಶ್ರೀ ಕೆ.ಎನ್. ಶಸಿಧರ್ ರವರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.



**ತುಮಕೂರು :** ದಿನಾಂಕ 18.07.2026ರಂದು ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ, ಸಹಕಾ–ರಿಯು ಸ್ಥಾಪನೆಯಾಗಿ 25 ವರ್ಷಗಳು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಬೆಳ್ಳಿ ಹಬ್ಬದ ಪ್ರಯುಕ್ತ ಕ್ರಿಕೆಟ್ ಕ್ರೀಡಾಕೂಟವನ್ನು ತುಮಕೂ–ರಿನ ಎಸ್ಐಟಿ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದರು. ಸಂಯುಕ್ತ ಸಹಕಾ–ರಿಯ ಮಾನ್ಯ ನಿರ್ದೇಶಕರು ಹಾಗೂ ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಟಿ.ಎಲ್. ಸುರೇಶರಾವ್ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಹಾಗೂ ಪಾವಗಡ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರು ಉಪಸ್ಥಿತರಿದ್ದರು.



**ವಿಜಯಪುರ :** ದಿನಾಂಕ 16.07.2026 ರಂದು ದಿ ಬಸವನ ಬಾಗೇವಾಡಿ ಸೌಹಾರ್ದ ಸಹಕಾರಿ ನಿ., ಬಸವನ ಬಾಗೇವಾಡಿ ಸಹಕಾರಿಯ ಕೇಂದ್ರ ಕಛೇ–ರಿಯ ಉದ್ಘಾಟನಾ ಸಮಾರಂಭ ಜರುಗಿತು. ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಶ್ರೀ ಮ.ನಿ.ಪ್ರ.ಸಿದ್ಧಲಿಂಗ ಮಹಾಸ್ವಾಮಿಗಳು, ವಿರಕ್ತಮಠ ಬಸವನ ಬಾಗೇವಾಡಿ ಮತ್ತು ಶ್ರೀ ಷ.ಬ್ರ.ಶಿವಪ್ರಕಾಶ ಶಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ಬಸವನ ಬಾಗೇವಾಡಿ ಇವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಸಂಜಯ ಪಾಟೀಲ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಶೇಖರ ದಳವಾಯಿ, ನಿರ್ದೇಶಕರು ಡಿ.ಸಿ.ಸಿ.ಬ್ಯಾಂಕ ವಿಜಯಪುರ, ಶ್ರೀ ಸಂಗನಗೌಡ ಕ.ಚಿಕ್ಕೊಂಡ, ಅಧ್ಯಕ್ಷರು ಪಿ.ಕೆ.ಪಿ.ಎಸ್. ಬಸವನಬಾಗೇವಾಡಿ, ಶ್ರೀ ಶಿವನಗೌಡ ಎಸ್.ಬಿರಾದಾರ, ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಮಾ ಸಹಕಾರಿ ಮಹಾಮಂಡಳ ಬೆಂಗಳೂರು, ಶ್ರೀ ಸಂಗಮೇಶ ಓಲೇಕಾರ, ಉಪಾಧ್ಯಕ್ಷರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪತ್ತಿನ ಸಹಕಾರ ಸಂಘ ನಿ., ಬಸವನ ಬಾಗೇವಾಡಿ, ಶ್ರೀ ವಾಯ್.ಬಿ.ಮುತ್ತತ್ತಿ, ನಿವೃತ್ತರು, ಸಾರಿಗೆ ಇಲಾಖೆ ಸಾ.ಹಾಲಿಹಾಳ, ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಪ್ರತಿಭಾ ಮಠ ಇವರು ಉಪಸ್ಥಿತರಿದ್ದರು. ಈ ಸಂಧರ್ಭದಲ್ಲಿ ಶ್ರೀ ಸಂಜಯ ಪಾಟೀಲ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರಿಗೆ ಸಹಕಾ–ರಿಯ ವತಿಯಿಂದ ಸನ್ಮಾನಿಸಲಾಯಿತು

# ಗದಗ ಜಿಲ್ಲೆಯ ನೂತನ ಜಿಲ್ಲಾ ಸಂಪರ್ಕ ಕಚೇರಿ ಉದ್ಘಾಟನೆ



**ಗದಗ:** ದಿನಾಂಕ 29.07.2026 ರಂದು ಗದಗ ಜಿಲ್ಲೆಯ ನೂತನ ಜಿಲ್ಲಾ ಸಂಪರ್ಕ ಕಚೇರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ಅವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆ ಅವರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಇವರು ಭಾಗವಹಿಸಿದ್ದರು. ಈ ಸಂಧರ್ಭದಲ್ಲಿ ಗದಗ್ ಜಿಲ್ಲೆಯ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿದ್ದರು.



**ಶಿವಮೊಗ್ಗ :** ದಿನಾಂಕ 24.07.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಮತ್ತು ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಶಿವಮೊಗ್ಗ ಹಾಗೂ ಮಹಾರಾಜ ಗೃಹವೈಭವ, ಶಿವಮೊಗ್ಗ ಇವರ ಸಹಯೋಗದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬಂಗಾರದ ಆಭರಣ ಅಡಮಾನ ಸಾಲ ನೀಡುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಪ್ರಾಯೋಗಿಕವಾಗಿ ಬಂಗಾರದ ಆಭರಣ ಪರೀಕ್ಷೆ ಮಾಡುವ ಮಿಷನ್‌ಗಳ ಮೂಲಕ ಮಾಹಿತಿ ಕಾರ್ಯಾಗಾರವನ್ನು ಮಹಾರಾಜ ಗೃಹವೈಭವ, ಶಿವಮೊಗ್ಗ ಇಲ್ಲಿ ಆಯೋಜನೆ ಮಾಡಲಾಗಿತ್ತು. ಈ ಕಾರ್ಯಾಗಾರಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್, ಪ್ರಸನ್ನಕುಮಾರ ರವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸುರೇಶ್ ಎಸ್. ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಹರಿಕೃಷ್ಣ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಉಪಸ್ಥಿತ–ರಿದ್ದರು. ಗೋದ್ರೇಜ್ ಕಂಪನಿಯ ಸೇಲ್ಸ್ ಮ್ಯಾನೇಜರ್ ಶ್ರೀ ವೆಂಕಟೇಶ ಪ್ರಸಾದ ರವರು ಮಿಷನ್‌ಗಳ ಮೂಲಕ ಬಂಗಾರ ಮೌಲ್ಯಮಾಪನದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ 26 ಸಹಕಾರಿಗಳಿಂದ 60 ಪ್ರತಿನಿಧಿಗಳು ಭಾಗವಹಿಸಿದ್ದರು.



**ತುಮಕೂರು :** ದಿನಾಂಕ 25.07.2026ರಂದು ಸ್ನೇಹ ಸಂಗಮ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಇದರ 2025–26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ತುಮಕೂರಿನ ಬಾವಿಕಟ್ಟೆ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಂಗವಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಹಾಗೂ ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಲ್. ಸುರೇಶ್‌ರಾವ್ ರವರು ಸ್ನೇಹ ಸಂಗಮ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಮಂಜುನಾಥ್ ರವರನ್ನು ಭೇಟಿ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ಹಾಗೂ ಕಿರಿಯ ಸಹಾಯಕರಾದ ಶ್ರೀ ಗೋವಿಂದ ರವರು ಉಪಸ್ಥಿತರಿದ್ದರು.



**ನಾಗನೂರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ, ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಾಗನೂರ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಎಲ್ಲಾ ವರ್ಗದ ಸಿಬ್ಬಂದಿಯವರಿಗೆ ರವಿವಾರ ದಿನಾಂಕ 26–07–2026ರಂದು ಸಂಘದ ಸಭಾಭವನದಲ್ಲಿ ಒಂದು ಪೂರ್ತಿ ದಿನದ "ವಿಷಯಾಧಾರಿತ ತರಬೇತಿ ಕಾರ್ಯಾಗಾರದ" ಉದ್ಘಾಟನೆ ಸಮಾರಂಭವನ್ನು ಸಂಘದ ಅಧ್ಯಕ್ಷರಾದ ಶ್ರೀ ಬಸವರಾಜಗೌಡಪ್ಪ ತಡಸನವರ ಉದ್ಘಾಟಿಸಿದರು. ಸಮಾರಂಭದಲ್ಲಿ ನಿರ್ದೇಶಕರಾದ ಶ್ರೀ ವೆಂಕಪ್ಪಗಂಗಪ್ಪ ಪೂಜೇರಿ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಡಾ॥ ನಂದಿಶ್ ವಿ. ಹಿರೇಮಠ ಮತ್ತು ಶ್ರೀ ಡಾ॥ ಕೃಷ್ಣ ರಂಗಸ್ವಾಮಿ ಸಂಘದ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಶ್ರೀ ಪ್ರಕಾಶ ಬಸಪ್ಪಅಂಗಡಿ ಮತ್ತು ಹಣಕಾಸು ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭೀಮಪ್ಪ ಬಂಡಿವಡ್ಡರ & ಶ್ರೀ ಶಿವಾನಂದ ಕರಿಹೊಳಿ, ಶಾಖಾ ವ್ಯವಸ್ಥಾಪಕರಾದ ಶ್ರೀ ಆನಂದ ಮಳವಾಡ ಮತ್ತು ಶ್ರೀ ಶಶಿಕಾಂತ ಹೆಬ್ಬಾಳ ಉಪಸ್ಥಿತರಿದ್ದರು. ತರಬೇತಿಯಲ್ಲಿ ಒಟ್ಟು 124 ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ಅಂತರರಾಷ್ಟ್ರೀಯ ಸಹಕಾರ ದಿನ



**ಕೊಪ್ಪಳ** : ದಿನಾಂಕ 04.07.2026ರಂದು ಸಂಯುಕ್ತ ಸಹಕಾ–ರಿಯ ವತಿಯಿಂದ ಶಿವಶಾಂತವೀರ ಮಂಗಲ ಭವನ ಕೊಪ್ಪಳದಲ್ಲಿ ಅಂತರಾಷ್ಟ್ರೀಯ ಸಹಕಾರ ದಿನಾಚರಣೆಯ ಅಂಗವಾಗಿ "ಶಾಂತಿಯುತ ವಿಶ್ವಕ್ಕಾಗಿ ಸಹಕಾರ ಸಂಸ್ಥೆಗಳು" (Cooperative for a peaceful world) ಎಂಬ ಘೋಷವಾಕ್ಯದೊಂದಿಗೆ ಕಾರ್ಯಕ್ರಮದ ಧ್ವಜಾರೋಹಣ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಜಿ. ಶ್ರೀಧರರವರು ಹಾಗೂ ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರು, ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರು, ಕೊಪ್ಪಳ ಜಿಲ್ಲಾ ಒಕ್ಕೂಟದ ನಿರ್ದೇಶಕರು ಹಾಗೂ ಆರ್.ಕೆ.ಡಿಸಿಸಿ ಬ್ಯಾಂಕ್ ನಿರ್ದೇಶಕರು, ಸಂಯುಕ್ತ ಸಹಕಾರಿಯ ಪ್ರಾಂತೀಯ ಅಧಿಕಾರಿಯವರು ಮತ್ತು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರು ಸೇರಿ 60 ಜನ ಉಪಸ್ಥಿತರಿದ್ದರು.



**ಬೀದರ** : ದಿನಾಂಕ 04.07.2026ರಂದು ಕಲಬುರಗಿ ಪ್ರಾಂತೀಯ ಕಛೇರಿ ಮತ್ತು ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿಯಮಿತ ಇದರ ವತಿಯಿಂದ 2026ರ ಜುಲೈ 4 ರಂದು 104 ನೇ ಅಂತರರಾಷ್ಟ್ರೀಯ ಸಹಕಾರ ದಿನ ಹಾಗೂ 32ನೇ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಹಕಾರ ದಿನವನ್ನು ಶಾಂತಿಯುತ ವಿಶ್ವಕ್ಕಾಗಿ ಸಹಕಾರ ಸಂಸ್ಥೆಗಳು" Coopera-tives for a Peaceful World) ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ ರವರು ನೆರವೇರಿಸಿದರು. ಶಾಂತಿಯುತ ವಿಶ್ವಕ್ಕಾಗಿ ಸಹಕಾರಿಗಳು ಎಂಬ ಘೋಷವಾಕ್ಯವನ್ನು ಸಾರಿದರು. ಈ ಸಭೆಗೆ ಬೀದರ್ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ನಾಗಶೆಟ್ಟಿ ಪಾಟೀಲ್ ಸುಂಕನಾಳ್ ಮತ್ತು ನಿರ್ದೇಶಕರಾದ ಶ್ರೀಕಾಂತ್ ಸ್ವಾಮಿ ಸೋಲಾಪುರ್ ರವರು ಹಾಗೂ ಬೀದರ್ ಜಿಲ್ಲಾ ಸಹಕಾರಿಗಳಿಂದ ವಿಜಯಕುಮಾರ್ ಗಜರೇ, ಶಿವಶಂಕರ್ ಬೆಂಬೂಳಗೆ, ಶಿವರಾಜ್ ಹೂಗಾರ್, ಅಮೃತ್ ಹೊಸಮನಿ, ನಾಗೇಶ್ ಸ್ವಾಮಿ, ಅನಿಲ್ ಕೊಡಂಬಲ್ ಮತ್ತು ರಾಹುಲ್ ಪೋಳ್ ರವರು ಹಾಗೂ ಸ್ಥಳೀಯ 7 ಸೌಹಾರ್ದ ಸಹಕಾರಿಗಳಿಂದ 15 ಜನ ಸಹಕಾರಿಗಳು ಉಪಸ್ಥಿತರಿದ್ದರು.



**ತುಮಕೂರು** : ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ 104ನೇ ಅಂತರರಾಷ್ಟ್ರೀಯ ಸಹಕಾರ ದಿನದ ಅಂಗವಾಗಿ ಧ್ವಜಾರೋಹಣವನ್ನು ನೆರವೇರಿಸಿಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಸಂಯುಕ್ತ ಸಹಕಾ–ರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎನ್. ಲಕ್ಷ್ಮೀನಾರಾಯಣ ರವರು, ಒಕ್ಕೂಟದ ಆಡಳಿತ ಮಂಡಲಿ ಸದಸ್ಯರು ಭಾಗವಹಿಸಿ ಧ್ವಜಾರೋಹಣವನ್ನು ನೆರವೇರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್, ರವರು ಭಾಗವಹಿಸಿದ್ದರು.



**ಧಾರವಾಡ:** ದಿನಾಂಕ 04.07.2026 ರಂದು ಧಾರವಾಡ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿಯಮಿತ, ಧಾರವಾಡ ಇಲ್ಲಿ 104ನೇಯ ಅಂತರರಾಷ್ಟ್ರೀಯ ಸಹಕಾರ ದಿನದ ಅಂಗವಾಗಿ ಶಾಂತಿಯುತ ವಿಶ್ವಕ್ಕಾಗಿ ಸಹಕಾರಿ ಸಂಸ್ಥೆಗಳು ಎನ್ನುವ ಘೋಷವಾಕ್ಯದೊಂದಿಗೆ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಬಸವರಾಜ ಜವಳಿ ರವರು ಹಾಗೂ ಇತರ ಸಹಕಾರಿಗಳು ಉಪಸ್ಥಿತರಿದ್ದರು.

ನಿಮ್ಮ ಪ್ರಶ್ನೆ




ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ. –ಸಂಪಾದಕರು

**ಪ್ರಶ್ನೆ : ಶ್ರೀ ಜಗದೀಶ್ ಜೋಶಿ–ಹುಬ್ಬಳ್ಳಿ** **ಉತ್ತರ : ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ.)**

**ಪ್ರಶ್ನೆ 1. ಭದ್ರತಾ ಸಾಲದ ಸುಸ್ತಿ ಸಾಲಿನ ವಸೂಲಿಯ ಪ್ರಕ್ರಿಯೆ ಸಂಪೂರ್ಣ ಮುಗಿದ ಮೇಲೆ, ಸಾಲ ವಸೂಲಾಗದೇ, ಸದ್ರಿ ಆಸ್ತಿ ಸಹಕಾರಿ ಹೆಸರಿನಲ್ಲಿ ವರ್ಗಾವಣೆಯಾದ ಮೇಲೆ**

**ಅ) ಆಸ್ತಿ ಎಷ್ಟು ವರ್ಷದಲ್ಲಿ ಮಾರಾಟ ಮಾಡಬೇಕು? ಅವಧಿಯ ಗರಿಷ್ಠ ಮಿತಿ ಎನು?**

**ಆ) ಮಾರಾಟ ಮಾಡದೇ ಸಹಕಾರಿಯ ಉಪಯೋಗಕ್ಕಾಗಿ (ಮನೆ ಅಥವಾ ನಿವೇಶನ ಅಥವಾ ಯಾವುದೇ ಸ್ವತ್ತು) ಬಳಸಬಹುದೇ?**

**ಇ) ನಿರ್ದಿಷ್ಠ ಅವಧಿ ಮುಗಿದ ಮೇಲೆ ಆಸ್ತಿ ಮಾರಾಟವಾಗದೇ ಇದ್ದಲ್ಲಿ, ಮುಂದಿನ ಪ್ರಕ್ರಿಯೇ ಎನು?**

**ಈ) ಆಸ್ತಿ ವರ್ಗಾವಣೆ ಆದ ತಕ್ಷಣ ಸಾಲ ಮುಕ್ತಾಯಗೊಳಿಸಬೇಕೋ? ಅಥವಾ ಆಸ್ತಿ ಮಾರಾಟ ಮಾಡಿದಾಗ ಸಾಲಗಾರನ ಸಾಲ ಮುಕ್ತಾಯಿಸಬೇಕೆ?**

**ಉ) ಗರಿಷ್ಠ ಅವಧಿ ಮುಗಿದಿದಲ್ಲಿ ಸಾಲಗಾರನ ಆಸ್ತಿ ವಾಪಸ ಮಾಡಬೇಕಾಗುತ್ತಿಯೋ?**

**ಊ) ಸಾಲಕ್ಕೆ ಸ್ವತ್ತು ಮೌಲ್ಯ ಕಡಿಮೆ ಆದಲ್ಲಿ ಅಥವಾ ಹೆಚ್ಚಾದಲ್ಲಿ ಎನು ಮಾಡಬೇಕು?**

ಉತ್ತರ : ಸಾಲ ಸುಸ್ತಿಯಾಗಿ ಡಿಕ್ರಿ ಪಡೆದ ನಂತರ ವಸೂಲಿ ಪ್ರಕ್ರಿಯೆ ಮುಗಿಯುವ ಸಂದರ್ಭದಲ್ಲಿ ಸಹಕಾರಿ ಹೆಸರಿಗೆ ಅಡಮಾನ ಮಾಡಿದ ಆಸ್ತಿಯನ್ನು ಸಹಕಾರಿಯ ಹೆಸರಿನಲ್ಲಿ ವರ್ಗಾವಣೆ ಮಾಡಿಕೊಂಡ ನಂತರ ಆ ಆಸ್ತಿಯನ್ನು ಮುಂದೇನೇಮಾಡಬೇಕೆಂಬ ಬಗ್ಗೆ ಯಾವುದೇ ಸ್ಪಷ್ಟ ನಿರ್ದೇಶನವನ್ನು ಸಂಯುಕ್ತ ಸಹಕಾರಿ ನೀಡಿಲ್ಲ. ಆದರೆ ಭಾರತೀಯ ರಿಸರ್ವ್ ಬ್ಯಾಂಕ ಪಟ್ಟಣ ಸಹಕಾರ ಬ್ಯಾಂಕುಗಳ ಸಂಬಂಧಪಟ್ಟಂತೆ ಸಹಕಾರಿಗೆ ವರ್ಗಾವಣೆಯಾದ ಆಸ್ತಿಯನ್ನು ಗರಿಷ್ಠ 7 ವರ್ಷದ ವರೆಗೆ ಆ ಆಸ್ತಿಯನ್ನು ಮಾರಾಟ ಮಾಡತಕ್ಕದ್ದು. ಆ ಆಸ್ತಿಯನ್ನು ಸಂಬಂಧಪಟ್ಟ ಸಹಕಾರಿಯು ಅದೇ ನೀತಿಗೆ ಪೂರಕವಾಗಿ 7 ವರ್ಷದ ಒಳಗೆ ಆ ಆಸ್ತಿಯನ್ನು ಮರುಮಾರಟ ಮಾಡುವ ವ್ಯವಸ್ಥೆ ಮಾಡತಕ್ಕದ್ದು. ಆ ಅವಧಿಯಲ್ಲಿಯೂ ಆ ಆಸ್ತಿಯನ್ನು ಮಾರಾಟ ಮಾಡಲಾಗದೆ ಇದ್ದ ಸಂದರ್ಭದಲ್ಲಿ ಅದನ್ನು ಸಹಕಾರಿಯೇ ಉಪಯೋಗಿಸಿಕೊಳ್ಳುವ ಅವಕಾಶ ಇದೇ, ಅದನ್ನೇ ಅನುಸರಿಸಬಹುದು. ಆ ಆಸ್ತಿಯನ್ನು ಸಹಕಾರಿಗೆ ಅವಶ್ಯಕವಿಲ್ಲವೆಂದು ಆಡಳಿತ ಮಂಡಳಿ ತೀರ್ಮಾನಿಸಿದ್ದರೆ ಯಾವುದೇ ಸಂದರ್ಭದಲ್ಲಿ ಹಾರಜು ಹಾಕಿ ವಸೂಲಿ ಮಾಡಿಕೊಳ್ಳುವ ಅವಕಾಶ ಇದ್ದೇ ಇರುತ್ತದೆ.

ಈ ಆಸ್ತಿಯನ್ನು ಯಾವ ಸಾಲಗಾರರ ಬಾಕಿಗಾಗಿ ಸಹಕಾರಿ ಹೆಸರಿಗೆ ವರ್ಗಾವಣೆಯಾಗಿದಿಯೋ, ಆ ಆಸ್ತಿಯನ್ನು ಮೂಲ ಸಾಲಗಾರನಿಗೆ ವರ್ಗಾವಣೆ ಮಾಡತಕ್ಕದಲ್ಲ. ಸಹಕಾರಿಯೇ ಆ ಆಸ್ತಿ ಸಹಕಾರಿಗೆ ಅವಕಾಶವೆಂದು ತೀರ್ಮಾನಿಸಿದ್ದರೆ ಆ ಆಸ್ತಿಯನ್ನು ಅಭಿವೃದ್ಧಿ ಪಡಿಸಿ ಸದಸ್ಯರಿಗೆ ಸವಲತ್ತುಗಳನ್ನು ನೀಡಲು ಉಪಯೋಗಿಸಿಕೊಳ್ಳಬಹುದು. ಆದರೆ ಸಹಕಾರಿಯು ತನ್ನ ನೌಕಕರಿಗೆ ಅಥವಾ ಪದಾಧಿಕಾ–ರಿಗಳಿಗೆ ನಿವೇಶನ ಮಾಡಿ ಹಂಚಿಕೆ ಮಾಡತಕ್ಕದಲ್ಲ. ಆದರೆ ಸಹಕಾ–ರಿಯ ಮುಖ್ಯಕಾರ್ಯನಿರ್ವಾಹಕನು ಕೇಂದ್ರ ಸ್ಥಾನದಲ್ಲಿ ಇರಬೇಕೆಂದು ಅದಕ್ಕಾಗಿ ಆಡಳಿತ ಮಂಡಳಿ ತೀರ್ಮಾನಿಸಿ ಅವನಿಗೆ ಮನೆ ನಿರ್ಮಿಸಿ ಉಪಯೋಗಿಸಿಕೊಳ್ಳಬಹುದು ಅಥವಾ ದೊಡ್ಡ ಪ್ರಮಾಣದ ಸಹಕಾ–ರಿಯಾಗಿದ್ದರೆ ಸದಸ್ಯರ ಮತ್ತು ನೌಕರರ ಶಿಕ್ಷಣಕ್ಕಾಗಿ ಕಟ್ಟದ ನಿರ್ಮಿಸಿ ತರಬೇತಿ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು ಮತ್ತು ಇನ್ನಿತರ ಸಹಕಾರಿ ಸಂಸ್ಥೆಗಳಿಗೆ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಬಹುದು.

ಸಹಕಾರಿ ಹೆಸರಿಗೆ ಆಸ್ತಿ ವರ್ಗಾವಣೆಯಾದ ದಿನಾಂಕದಂದೇ ಆ ಸಾಲಗಾರನ ಹೆಸರಿನಲ್ಲಿ ಇರುವ ಸಾಲವನ್ನು ಚುಕ್ತಮಾಡಿ ಜಮಾ–ಖರ್ಚು ಮಾಡತಕ್ಕದ್ದು. ಆಸ್ತಿ ಮೌಲ್ಯವನ್ನು ಅಧಿಕೃತ ಬೆಲೆ ನಿಗದಿಪಡಿಸುವ ಅಧಿಕಾರ ಹೊಂದಿರುವ ಅಭಿಯಂತರರು ಮೂಲಕ ಬೆಲೆ ನಿಗದಿಪಡಿಸಿಕೊಂಡು ಲೆಕ್ಕಪತ್ರಗಳಲ್ಲಿ ದಾಖಲಿಸತಕ್ಕದ್ದು. ಅಂದರೆ ಬಾಕಿ ಇದ್ದ ಸಾಲದ ಅಸಲು ಮತ್ತು ಬಡ್ಡಿಯನ್ನು ಸಹಕಾರಿ ಹೆಸರಿಗೆ ವರ್ಗಾವಣೆಯಾದ ದಿನಾಂಕದಂದೇ ಜಮಾ–ಖರ್ಚು ಮಾಡಿಕೊಳ್ಳತಕ್ಕದ್ದು ಮತ್ತು ಅವನ ಹೆಸರಿನಲ್ಲಿ ಯಾವುದೇ ಬಾಕಿ ಇಲ್ಲವೆಂದು ದಾಖಲಿಸಿಕೊಳ್ಳತಕ್ಕದ್ದು. ಅಕಸ್ಮಾತ್ ವರ್ಗಾವಣೆ ಮಾಡಿಕೊಂಡ ಆಸ್ತಿಯ ಬೆಲೆ ಸಾಲಕ್ಕಿಂತ ಕಡಿಮೆ ಇದ್ದಾಗ ಅಂತಹ ಸಾಲಗಾರನ ಉಳಿದ ಆಸ್ತಿಗಳ ಮೇಲೆ ಜಪ್ತಿಮಾಡಿ ವಸೂಲಿ ಮಾಡಿಕೊಳ್ಳುವ ಅಧಿಕಾರ ಸಹಕಾರಿಗೆ ಇದೆ.

ಮೇಲೆ ಹೇಳಿದಂತೆ ಯಾವುದೇ ಕಾರಣಕ್ಕೂ ಸಾಲ ಮುಕ್ತಾಯವಾದ ನಂತರ ಸಾಲಗಾರನಿಗೆ ಅದೇ ಆಸ್ತಿಯನ್ನು ಮರುವರ್ಗಾವಣೆ ಮಾಡತಕ್ಕದಲ್ಲ.

**ಪ್ರಶ್ನೆ 2. ಒಬ್ಬ ವ್ಯಕ್ತಿ ಸಿಂಪಲ್ ಮಾರ್ಟಗೇಜ್/ ಡಿ.ಟಿ.ಡಿ. ಮಾಡಿ ಸಾಲ ಪಡೆದು, ಸದರ ಸಾಲ ಸಂಪೂರ್ಣ ಮರುಪಾವತಿ ಮಾಡಿದ್ದಾನೆ, ಸದರ ಸಾಲಗಾರನು ಅದೇ ಮೌಲ್ಯದ ಸಾಲದ ಬೇಡಿಕೆ ಇಟ್ಟಾಗ, ಹಳೆಯ ಬೋಜಾ ಮೇಲೆ ಸಾಲ ವಿತರಿಸಬಹುದೇ? ಇಲ್ಲವಾದಲ್ಲಿ ಯಾವ ಪರಿಣಾಮ ಆಗಬಹುದು. ಏಕೆಂದರೇ ಬೋಜಾಗಳ ಮೇಲೆ ಅವಧಿ ಅಥವಾ ಯಾವ ಸಾಲಕ್ಕೆ ಯಂದು ನಮೂದಿಸಿರುವುದಿಲ್ಲ. ಕಾರಣ ಹಳೆಯ ಬೋಜಾ ಹೊಸ ಸಾಲಕ್ಕೆ ಪರಿಗಣಿಸಬಹುದೆ.?**

ಉತ್ತರ : ಒಬ್ಬ ಸಾಲಗಾರ ಸಂಘದ ಹೆಸರಿನಲ್ಲಿ ಆಸ್ತಿಯನ್ನು ಅಡಮಾನ ಮಾಡಿ ಸಾಲ ಪಡೆದಾಗ ಸಾಲ ಮರುಪಾವತಿಯ ನಂತರ ಆ ವ್ಯವಹಾರ ಮುಕ್ತಾಯವಾಗುತ್ತದೆ. ಅದೇ ಅಡಮಾನದ ಆಧಾರದ ಮೇಲೆ ಮತ್ತೊಂದು ಸಾಲವನ್ನು ಕೊಡಲಾಗದು ಏಕೆಂದರೆ ಸಾಲ ಚುಕ್ತ ಆದ ನಂತರ ಅಡಮಾನ ಆಸ್ತಿ ಬಿಡುಗಡೆಯಾಗುತ್ತದೆ. ಆದ್ದರಿಂದ ಅದೇ ಅಡಮಾನ ಆಸ್ತಿಯ ಆಧಾರದಲ್ಲಿ ಮತ್ತೊಮ್ಮೆ ಸಾಲ ಮಂಜುರೂ ಮಾಡತಕ್ಕದ್ದಲ್ಲ.

ಅದೇ ವ್ಯಕ್ತಿ ಸಾಲ ಕೇಳಿದಾಗ ಮತ್ತೊಮ್ಮೆ ಅಡಮಾನ ಮಾಡಿಕೊಂಡು ಸಾಲ ನೀಡಬಹುದು ಏಕೆಂದರೆ ಒಮ್ಮೆ ಬೋಜಾ ಬಿಡುಗಡೆಯಾದ ನಂತರ ಅದೇ ಆಸ್ತಿಯ ಮೇಲೆ ಸಹಕಾರಿಯ ಯಾವುದೇ ಅಧಿಕಾರ ಇರುವುದಿಲ್ಲ. ಆದ್ದರಿಂದ ಹಳೇ ಬೋಜಾವನ್ನ ಹೊಸ ಸಾಲಕ್ಕೆ ಹೊಂದಾಣಿಕೆ ಮಾಡಲಾಗುವುದಿಲ್ಲ.

# ಸಹಕಾರಿ ಸಂಸ್ಥೆಗಳಲ್ಲಿ ಹಣಕಾಸು ಆರೋಗ್ಯದ ಮೌಲ್ಯಮಾಪನ



– ಸಿಎ. ಮಧುಕರ ಜಿ ಹೆಗಡೆ

### 1. ಪೀಠಿಕೆ (Introduction):

ಯಾವುದೇ ಸಂಸ್ಥೆಯ ಹಣಕಾಸು ಆರೋಗ್ಯದ ಮೌಲ್ಯಮಾಪನವು ಅದರಲ್ಲಿ ಆಸಕ್ತಿ ಹೊಂದಿರುವ ಸದಸ್ಯರು, ಆಡಳಿತ ಮಂಡಳಿ, ಹೂಡಿಕೆದಾರರು, ಉದ್ಯೋಗಿಗಳು, ನಿಯಂತ್ರಕರು, ಸರ್ಕಾರ ಮತ್ತು ಇತರ ಎಲ್ಲಾ ಪಾಲುದಾರರಿಗೆ ಅತ್ಯಂತ ಅಗತ್ಯವಾಗಿರುತ್ತದೆ. ಹಣಕಾಸು ಆರೋಗ್ಯದ ಮೌಲ್ಯಮಾಪನವು ವಿವಿಧ ಪಾಲುದಾರರಿಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಪ್ರತಿಯೊಂದು ಸಂಸ್ಥೆಯೂ ತನ್ನ ಅಭಿವೃದ್ಧಿಗಾಗಿ ನಿಯತಕಾಲಿಕವಾಗಿ (ಕಾಲಕಾಲಕ್ಕೆ) ತನ್ನ ಹಣಕಾಸು ಆರೋಗ್ಯವನ್ನು ಮೌಲ್ಯಮಾಪನ ಮಾಡಿಕೊಳ್ಳಬೇಕಾಗುತ್ತದೆ.

ಹಣಕಾಸು ಆರೋಗ್ಯದ ಮೌಲ್ಯಮಾಪನ ಎಂಬುದು ಸಹಕಾರಿ ಸಂಸ್ಥೆಯ ಹಣಕಾಸು ಸಾಮರ್ಥ್ಯ, ಸ್ಥಿರತೆ, ದಕ್ಷತೆ ಮತ್ತು ಸುಸ್ಥಿರತೆಯ ಒಂದು ವ್ಯವಸ್ಥಿತ ಮೌಲ್ಯಮಾಪನವಾಗಿದೆ. ವಾಣಿಜ್ಯ ಸಂಸ್ಥೆಗಳಿಗಿಂತ ಭಿನ್ನವಾಗಿ, ಸಹಕಾರಿ ಸಂಸ್ಥೆಯ ಪ್ರಾಥಮಿಕ ಉದ್ದೇಶವು ಕೇವಲ ಲಾಭವನ್ನು ಗರಿಷ್ಠಗೊಳಿಸುವುದಲ್ಲ, ಬದಲಿಗೆ ಹಣಕಾಸಿನ ಸುಸ್ಥಿರತೆಯನ್ನು ಕಾಯ್ದುಕೊಳ್ಳುತ್ತಾ ಸದಸ್ಯರ ಕಲ್ಯಾಣವನ್ನು ಖಚಿತಪಡಿಸುವುದಾಗಿದೆ.

**ಹಣಕಾಸಿನ ದೃಷ್ಟಿಯಿಂದ ಸದೃಢವಾಗಿರುವ ಸಹಕಾರಿ ಸಂಸ್ಥೆಯು ಈ ಕೆಳಗಿನ ಸಾಮರ್ಥ್ಯಗಳನ್ನು ಹೊಂದಿರುತ್ತದೆ:**

- ತನ್ನ ಹಣಕಾಸಿನ ಹೊಣೆಗಾರಿಕೆಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸುವುದು.
- ಸದಸ್ಯರ ಹಣವನ್ನು ರಕ್ಷಿಸುವುದು.
- ಸೂಕ್ತ ಪ್ರಮಾಣದ ಉಳಿಕೆಯನ್ನು (Surplus) ಗಳಿಸುವುದು.
- ಸಾಕಷ್ಟು ದ್ರವ್ಯತೆಯನ್ನು (Liquidity/ನಗದು ಲಭ್ಯತೆ) ಕಾಯ್ದುಕೊಳ್ಳುವುದು.
- ಸದಸ್ಯರಿಗೆ ಗುಣಮಟ್ಟದ ಸೇವೆಗಳನ್ನು ಒದಗಿಸುವುದು.
- ಹಣಕಾಸಿನ ಸ್ಥಿರತೆಗೆ ಧಕ್ಕೆಯಾಗದಂತೆ ವ್ಯವಹಾರವನ್ನು ವಿಸ್ತರಿಸುವುದು.
- ಆರ್ಥಿಕ ಅನಿಶ್ಚಿತತೆಗಳನ್ನು ಎದುರಿಸುವುದು.

ಆದ್ದರಿಂದ, ನಿಯತಕಾಲಿಕ ಹಣಕಾಸು ಆರೋಗ್ಯದ ಮೌಲ್ಯಮಾಪನವು ಆಡಳಿತ ಮಂಡಳಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO), ಹಣಕಾಸು ಸಮಿತಿ, ಆಂತರಿಕ ಲೆಕ್ಕಪರಿಶೋಧಕರು, ಶಾಸನಬದ್ಧ ಲೆಕ್ಕಪರಿಶೋಧಕರು ಮತ್ತು ನಿಯಂತ್ರಕ ಪ್ರಾಧಿಕಾರಗಳ ಪ್ರಮುಖ ಜವಾಬ್ದಾರಿಗಳಲ್ಲಿ ಒಂದಾಗಿದೆ.

### 2. ಹಣಕಾಸು ಆರೋಗ್ಯ ಮೌಲ್ಯಮಾಪನದ ಉದ್ದೇಶಗಳು (Objectives of Financial Health Assessment):

**ಇದರ ಪ್ರಮುಖ ಉದ್ದೇಶಗಳು ಹೀಗಿವೆ:**

1. ಹಣಕಾಸಿನ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವುದು.
2. ಕಾರ್ಯಾಚರಣೆಯ ದಕ್ಷತೆಯನ್ನು ಅಳೆಯುವುದು.
3. ಹಣಕಾಸಿನ ಅಪಾಯಗಳನ್ನು ಗುರುತಿಸುವುದು.
4. ಲಾಭದಾಯಕತೆ ಮತ್ತು ಸುಸ್ಥಿರತೆಯನ್ನು ಅಳೆಯುವುದು.
5. ಸಾಲ ತೀರಿಸುವ ಸಾಮರ್ಥ್ಯವನ್ನು (Solvency) ಪರಿಶೀಲಿಸುವುದು.
6. ಶಾಸನಬದ್ಧ ನಿಬಂಧನೆಗಳ ಪಾಲನೆಯನ್ನು ಖಚಿತಪಡಿಸುವುದು.
7. ನಿರ್ಧಾರ ಕೈಗೊಳ್ಳುವಲ್ಲಿ ಆಡಳಿತ ಮಂಡಳಿಗೆ ಸಹಾಯ ಮಾಡುವುದು.
8. ಸದಸ್ಯರ ವಿಶ್ವಾಸವನ್ನು ವೃದ್ಧಿಸುವುದು.
9. ಸಕಾಲಿಕ ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳಲು ಅನುವು ಮಾಡಿಕೊಡುವುದು.
10. ದೀರ್ಘಕಾಲೀನ ಯೋಜನೆಗಳಿಗೆ ಬೆಂಬಲ ನೀಡುವುದು.

### 3. ಮಾಹಿತಿಯ ಮೂಲಗಳು (Sources of Information):

ಮೌಲ್ಯಮಾಪನವು ಪ್ರಮಾಣೀಕೃತ ಹಣಕಾಸು ಮಾಹಿತಿಯ ಮೇಲೆ ಆಧಾರಿತವಾಗಿರಬೇಕು. ಪ್ರಮುಖ ಮೂಲಗಳು ಹೀಗಿವೆ:

- ಆಸ್ತಿ ಜವಾಬ್ದಾರಿ ಪಟ್ಟಿ (Balance Sheet) ಲಾಭ ಮತ್ತು ನಷ್ಟದ ಖಾತೆ (Profit & Loss Account)
- ಕಚ್ಚಾ ಜಮಾಖರ್ಚು ಪಟ್ಟಿ (Trial Balance) ನಗದು ಹರಿವಿನ ಹೇಳಿಕೆ (Cash Flow Statement)

- ವಾರ್ಷಿಕ ವರದಿಗಳು (Annual Reports) ಲೆಕ್ಕಪರಿಶೋಧನಾ ವರದಿ (Audit Report)
- ಆಯವ್ಯಯ (Budget) ಆಂತರಿಕ ಲೆಕ್ಕಪರಿಶೋಧನಾ ವರದಿಗಳು (Internal Audit Reports) ಸಾಲದ ವಹಿಗಳು (Loan Registers)
- ಠೇವಣಿ ವಹಿಗಳು (Deposit Registers) ಆಸ್ತಿ ವಹಿಗಳು (Asset Registers)
- ವಸೂಲಾತಿ ವಹಿಗಳು (Recovery Registers) ಮಂಡಳಿಯ ನಡಾವಳಿಗಳು (Minutes of Board)
- ಶಾಸನಬದ್ಧ ಅನುಸರಣೆ ವರದಿಗಳು (Statutory Compliance Reports)

**4. ಹಣಕಾಸು ಆರೋಗ್ಯ ಮೌಲ್ಯಮಾಪನದ ವಿಧಾನ** (Procedure for Financial Health Assessment):

ಒಂದು ವ್ಯವಸ್ಥಿತ ಮೌಲ್ಯಮಾಪನವು ಸಾಮಾನ್ಯವಾಗಿ ಈ ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ:

ಹಂತ 1: ಹಣಕಾಸು ಮಾಹಿತಿಯ ಸಂಗ್ರಹಣೆ:

**ಸಂಸ್ಥೆಯ ಹಣಕಾಸು ಆರೋಗ್ಯವನ್ನು ಮೌಲ್ಯಮಾಪನ ಮಾಡಲು, ಈ ಕೆಳಗಿನವುಗಳನ್ನು ಸಂಗ್ರಹಿಸುವುದು ಅತ್ಯಗತ್ಯ:**

- ಪ್ರಸಕ್ತ ವರ್ಷದ ಲೆಕ್ಕಪರಿಶೋಧಿತ ಹಣಕಾಸು ಹೇಳಿಕೆಗಳು.
- ಕಳೆದ 3–5 ವರ್ಷಗಳ ಹಣಕಾಸು ಹೇಳಿಕೆಗಳು.
- ಆಯವ್ಯಯ (ಬಜೆಟ್) ದಾಖಲೆಗಳು.
- ಲೆಕ್ಕಪರಿಶೋಧನೆಯ ಅವಲೋಕನಗಳು/ಆಕ್ಷೇಪಣೆಗಳು.
- ಶಾಸನಬದ್ಧ ಅನುಸರಣೆ ವರದಿಗಳು.

ಉದ್ದೇಶ: ದೀರ್ಘಕಾಲೀನ ಹಣಕಾಸು ಪ್ರವೃತ್ತಿಗಳನ್ನು ಅರ್ಥಮಾಡಿಕೊಳ್ಳುವುದು.

**ಹಂತ 2: ನಿಖರತೆಯ ಪರಿಶೀಲನೆ:**

ಈ ಕೆಳಗಿನ ಅಂಶಗಳನ್ನು ಪರಿಶೀಲಿಸಿ:

- ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸಲಾಗಿದೆಯೇ.
- ಲೆಕ್ಕಪತ್ರ ಮಾನದಂಡಗಳನ್ನು (Accounting Standards) ಅನುಸರಿಸಲಾಗಿದೆಯೇ.
- ಲೆಕ್ಕಪರಿಶೋಧನೆಯಲ್ಲಿ ಯಾವುದೇ ಷರತ್ತುಗಳು/ಆಕ್ಷೇಪಣೆಗಳು (Qualifications) ಇವೆಯೇ.
- ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸರಿಯಾಗಿ ವರ್ಗೀಕರಿಸಲಾಗಿದೆಯೇ.
- ಆದಾಯ ಮತ್ತು ವೆಚ್ಚಗಳನ್ನು ಸರಿಯಾಗಿ ಗುರುತಿಸಲಾಗಿದೆಯೇ.

**ಹಂತ 3: ಸಮಾನಾಂತರ ವಿಶ್ಲೇಷಣೆ (Horizontal Analysis):**

ಹೋಲಿಕೆ ಮಾಡಿ: ಪ್ರಸಕ್ತ ವರ್ಷ ಮತ್ತು ಹಿಂದಿನ ವರ್ಷಗಳು. ಉದಾಹರಣೆಗೆ:

| ಕ್ರ.ಸಂ | ವಿವರಗಳು | 2024–25 (ರೂ. ಲಕ್ಷಗಳಲ್ಲಿ) | 2025–26 (ರೂ. ಲಕ್ಷಗಳಲ್ಲಿ) | ಪ್ರಗತಿ (Growth) |
|---|---|---|---|---|
| 1 | ಒಟ್ಟು ಆದಾಯ | 200 | 250 | 25% |
| 2 | ಒಟ್ಟು ವೆಚ್ಚ | 150 | 185 | 23% |
| 3 | ನಿವ್ವಳ ಲಾಭ | 50 | 65 | 30% |
| 4 | ಒಟ್ಟು ವ್ಯವಹಾರ | 3500 | 4300 | 23% |

ಮೇಲಿನ ಕೋಷ್ಟಕವು ಸಂಸ್ಥೆಯ ಧನಾತ್ಮಕ ಬೆಳವಣಿಗೆಯನ್ನು ಸೂಚಿಸುತ್ತದೆ.

**ಹಂತ 4: ಲಂಬ ವಿಶ್ಲೇಷಣೆ (Vertical Analysis):**

ಪ್ರತಿಯೊಂದು ಹಣಕಾಸಿನ ಐಟಂ ಅನ್ನು ಶೇಕಡಾವಾರು ಪ್ರಮಾಣದಲ್ಲಿ ವ್ಯಕ್ತಪಡಿಸಲಾಗುತ್ತದೆ. ಉದಾಹರಣೆಗೆ:

- ಒಟ್ಟು ಆಸ್ತಿ = 100%
- ನಗದು = 3%
- ಹೂಡಿಕೆಗಳು = 20%
- ಸ್ಥಿರ ಆಸ್ತಿಗಳು = 5%
- ಸಾಲಗಳು = 70%
- ಇತರೆ = 2%

ಇದು ಆಸ್ತಿಗಳ ಕೇಂದ್ರೀಕರಣವನ್ನು ಗುರುತಿಸಲು ಸಹಾಯ ಮಾಡುತ್ತದೆ. ಜಮೀನು, ಕಟ್ಟಡ ಮುಂತಾದ ಸ್ಥಿರ ಆಸ್ತಿಗಳನ್ನು ಖರೀದಿಸಲು ದುಡಿಯುವ ಬಂಡವಾಳವು (Working Capital) ಎಲ್ಲಾದರೂ ಬ್ಲಾಕ್

ಆಗಿದೆಯೇ ಎಂಬುದನ್ನು ಮೌಲ್ಯಮಾಪನ ಮಾಡಲು ಇದು ಸಹಾಯ ಮಾಡುತ್ತದೆ. ಜಮೀನು ಮತ್ತು ಕಟ್ಟಡಗಳನ್ನು ಖರೀದಿಸಲು ದುಡಿಯುವ ಬಂಡವಾಳದ ಹೆಚ್ಚಿನ ಭಾಗವನ್ನು ಹೂಡಿಕೆ ಮಾಡುವುದು ಸೂಕ್ತವಲ್ಲ, ಏಕೆಂದರೆ ಇದು ಸಂಘದ ಗಳಿಕೆಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ.

**ಹಂತ 5: ಅನುಪಾತದ ವಿಶ್ಲೇಷಣೆ (Ratio Analysis):**

ಅನುಪಾತದ ವಿಶ್ಲೇಷಣೆಯು ಹಣಕಾಸು ಆರೋಗ್ಯ ಮೌಲ್ಯಮಾಪನದ ಹೃದಯವಿದ್ದಂತೆ. ವಿವಿಧ ಅನುಪಾತಗಳನ್ನು ಅನ್ವಯಿಸುವ ಮೂಲಕ ಸಂಘದ ಕಾರ್ಯಕ್ಷಮತೆಯು ನಿರೀಕ್ಷೆಗೆ ತಕ್ಕಂತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಮೌಲ್ಯಮಾಪನ ಮಾಡಬಹುದು. ಇಲ್ಲದಿದ್ದರೆ, ವ್ಯವಹಾರವನ್ನು ನಿರ್ವಹಿಸುವಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡಲು ಮತ್ತು ಮರು-ಮೌಲ್ಯಮಾಪನ ಮಾಡಲು ಇದು ಸಹಾಯ ಮಾಡುತ್ತದೆ.

**ಹಂತ 6: ಪ್ರವೃತ್ತಿ ವಿಶ್ಲೇಷಣೆ (Trend Analysis):**

ಹಲವಾರು ವರ್ಷಗಳ ಹಣಕಾಸು ಕಾರ್ಯಕ್ಷಮತೆಯನ್ನು ಅಧ್ಯಯನ ಮಾಡುವುದು ಮುಖ್ಯವಾಗಿದೆ. ಉದಾಹರಣೆ:

| ಕ್ರ.ಸಂ | ವಿವರಗಳು | 2023–24 (ರೂ. ಲಕ್ಷಗಳಲ್ಲಿ) | 2024–25 (ರೂ. ಲಕ್ಷಗಳಲ್ಲಿ) | 2025–26 (ರೂ. ಲಕ್ಷಗಳಲ್ಲಿ) |
|---|---|---|---|---|
| 1 | ಷೇರು ಬಂಡವಾಳ | 150 | 160 | 175 |
| 2 | ಕಾಯ್ದಿಟ್ಟ ನಿಧಿಗಳು (Reserves) | 300 | 340 | 400 |
| 3 | ಠೇವಣಿಗಳು | 2600 | 3000 | 3500 |
| 4 | ಸಾಲ ಪಡೆಯುವಿಕೆ (Borrowings) | 0 | 0 | 0 |
| 5 | ಹೂಡಿಕೆಗಳು | 1000 | 1200 | 1400 |
| 6 | ಸಾಲಮತ್ತುಮುಂಗಡಗಳು (Laons &Advances) | 2000 | 2350 | 2800 |
| 7 | ಸ್ಥಿರ ಆಸ್ತಿಗಳು | 50 | 52 | 55 |
| 8 | ಬಡ್ಡಿ ಆದಾಯ | 300 | 355 | 420 |
| 9 | ಬಡ್ಡಿಯೇತರ ಆದಾಯ | 10 | 12 | 15 |
| 10 | ಬಡ್ಡಿ ವೆಚ್ಚ | 210 | 240 | 280 |
| 11 | ಬಡ್ಡಿಯೇತರ ವೆಚ್ಚ | 30 | 35 | 40 |
| 12 | ಲಾಭ | 70 | 92 | 115 |
| 13 | ಕಾಲಾತೀತ ಸಾಲ (Overdue) | 200 | 220 | 250 |
| 14 | ದುಡಿಯುವ ಬಂಡವಾಳ | 3050 | 3500 | 4075 |
| 15 | ಒಟ್ಟು ಆಸ್ತಿಗಳು | 3200 | 3650 | 4355 |
| 16 | ಗಳಿಸುವ ಆಸ್ತಿಗಳು (Earning Assets) | 3000 | 3550 | 4200 |
| 17 | ಒಟ್ಟು ವ್ಯವಹಾರ | 4600 | 5350 | 6300 |
| 18 | ನೌಕರರ ಸಂಖ್ಯೆ | 6 | 6 | 6 |
| 19 | ಪಾವತಿಸಿದ ಲಾಭಾಂಶ (Dividend) | 15% | 15% | 15% |
| 20 | ಒಟ್ಟು ನೌಕರರ ಸಂಬಳ | 20 | 22 | 25 |

ಮೇಲಿನ ಕೋಷ್ಟಕವು ನಿರಂತರವಾದ ಮೇಲ್ಮುಖ ಪ್ರವೃತ್ತಿಯನ್ನು ಸೂಚಿಸುತ್ತದೆ ಮತ್ತು ಇದು ಆರೋಗ್ಯಕರ ಕಾರ್ಯಕ್ಷಮತೆಯಾಗಿದೆ.

### ಹಂತ 7: ಅರ್ಥವಿವರಣೆ (Interpretation):

ಕೇವಲ ಹಣಕಾಸಿನ ಅಂಕಿ–ಅಂಶಗಳು ಸಂಪೂರ್ಣ ಕಥೆಯನ್ನು ಹೇಳುವುದಿಲ್ಲ. ನಾವು ಈ ಕೆಳಗಿನವುಗಳನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ:

- ದ್ರವ್ಯತೆ (Liquidity) ಸುಧಾರಿಸುತ್ತಿದೆಯೇ ಅಥವಾ ಕ್ಷೀಣಿಸುತ್ತಿದೆಯೇ.
- ಸಾಲದ ಹೊರೆ ಹೆಚ್ಚಾಗುತ್ತಿದೆಯೇ ಅಥವಾ ಕಡಿಮೆಯಾಗುತ್ತಿದೆಯೇ.
- ಲಾಭದಾಯಕತೆ ಕಡಿಮೆಯಾಗುತ್ತಿದೆಯೇ ಅಥವಾ ಸುಧಾರಿಸುತ್ತಿದೆಯೇ.
- ವಸೂಲಾತಿ ಕಾರ್ಯಕ್ಷಮತೆ ದುರ್ಬಲಗೊಳ್ಳುತ್ತಿದೆಯೇ ಅಥವಾ ಬಲಗೊಳ್ಳುತ್ತಿದೆಯೇ.
- ದುಡಿಯುವ ಬಂಡವಾಳವು ಸಾಕಾಗುತ್ತಿದೆಯೇ ಅಥವಾ ಅಪೂರ್ಣವಾಗಿದೆಯೇ.
- ನಿವ್ವಳ ಬಡ್ಡಿ ಮಾರ್ಜಿನ್ (Net Interest Margin) ಹೆಚ್ಚಾಗುತ್ತಿದೆಯೇ ಅಥವಾ ಕಡಿಮೆಯಾಗುತ್ತಿದೆಯೇ.
- ಕಾಲಾತೀತ ಸಾಲಗಳು ಹೆಚ್ಚಾಗುತ್ತಿವೆಯೇ ಅಥವಾ ಕಡಿಮೆಯಾಗುತ್ತಿವೆಯೇ.
- ಪ್ರತಿ ಉದ್ಯೋಗಿಯ ಮೇಲಿನ ವ್ಯವಹಾರವು ಹೆಚ್ಚಾಗುತ್ತಿದೆಯೇ ಅಥವಾ ಕಡಿಮೆಯಾಗುತ್ತಿದೆಯೇ.
- ನಿಧಿಯ ವೆಚ್ಚ (Cost of funds) ಕಡಿಮೆಯಾಗುತ್ತಿದೆಯೇ ಅಥವಾ ಹೆಚ್ಚಾಗುತ್ತಿದೆಯೇ.
- ನಿವ್ವಳ ಮೌಲ್ಯ (Net worth) ಹೆಚ್ಚಾಗುತ್ತಿದೆಯೇ ಅಥವಾ ಕಡಿಮೆಯಾಗುತ್ತಿದೆಯೇ.

### ಹಂತ 8: ಶಿಫಾರಸು (Recommendation):

ಮೌಲ್ಯಮಾಪನದ ಆಧಾರದ ಮೇಲೆ ಅಂತಿಮವಾಗಿ ಈ ಕೆಳಗಿನವುಗಳನ್ನು ಸಿದ್ಧಪಡಿಸುವುದು ಮುಖ್ಯವಾಗಿದೆ:

- ಸಾಮರ್ಥ್ಯಗಳು (Strengths)
- ದೌರ್ಬಲ್ಯಗಳು (Weaknesses)
- ಅಪಾಯಗಳು (Risks)
- ತಿದ್ದುಪಡಿ ಕ್ರಮಗಳು (Corrective measures)
- ಉಸ್ತುವಾರಿ ಯೋಜನೆ (Monitoring plan)

### 5. ಹಣಕಾಸು ಆರೋಗ್ಯ ಮೌಲ್ಯಮಾಪನದ ಪ್ರಮುಖ ಕ್ಷೇತ್ರಗಳು (Major Areas of Financial Health Assessment):

ಎ. ದ್ರವ್ಯತೆ (Liquidity): ಯಾವುದೇ ಒತ್ತಡವಿಲ್ಲದೆ ಅಲ್ಪಾವಧಿಯ ಹೊಣೆಗಾರಿಕೆಗಳನ್ನು ಪಾವತಿಸುವ ಸಾಮರ್ಥ್ಯವನ್ನು ಸೂಚಿಸುತ್ತದೆ.

ಬಿ. ಸಾಲ ತೀರಿಸುವ ಸಾಮರ್ಥ್ಯ (Solvency): ಯಾವುದೇ ಸಾಲಗಳನ್ನು ಆಶ್ರಯಿಸದೆ ದೀರ್ಘಕಾಲೀನ ಜವಾಬ್ದಾರಿಗಳನ್ನು ಪೂರೈಸುವ ಸಾಮರ್ಥ್ಯವನ್ನು ಸೂಚಿಸುತ್ತದೆ.

ಸಿ. ಲಾಭದಾಯಕತೆ (Profitability): ವರ್ಷದಿಂದ ವರ್ಷಕ್ಕೆ ನಿರಂತರವಾಗಿ ಉಳಿಕೆಯನ್ನು (Surplus) ಗಳಿಸುವ ಸಾಮರ್ಥ್ಯವನ್ನು ಸೂಚಿಸುತ್ತದೆ.

ಡಿ. ಕಾರ್ಯಾಚರಣೆಯ ದಕ್ಷತೆ (Operational Efficiency): ಸಂಪನ್ಮೂಲಗಳನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ.

ಇ. ಆಸ್ತಿ ಗುಣಮಟ್ಟ (Asset Quality): ಹೂಡಿಕೆಗಳು ಮತ್ತು ಬರಬೇಕಾದ ಬಾಕಿಗಳ (Receivables) ಗುಣಮಟ್ಟವನ್ನು ತಿಳಿಯಲು ಮೌಲ್ಯಮಾಪನವು ಸಹಾಯ ಮಾಡುತ್ತದೆ.

ಎಫ್. ಬಂಡವಾಳದ ಪರ್ಯಾಪ್ತತೆ (Capital Adequacy): ನಿಧಿಯ ಸಾಮರ್ಥ್ಯವನ್ನು ಸೂಚಿಸುತ್ತದೆ.

ಜಿ. ಸುಸ್ಥಿರತೆ (Sustainability): ಭವಿಷ್ಯದ ಬೆಳವಣಿಗೆಯ ಸಾಮರ್ಥ್ಯವನ್ನು ಸೂಚಿಸುತ್ತದೆ.

### 6. ಪ್ರಮುಖ ಹಣಕಾಸು ಅನುಪಾತಗಳು (Important Financial Ratios):

1. ಸಿಡಿ ಅನುಪಾತ (CD Ratio - ಸಾಲ ಮತ್ತು ಠೇವಣಿ ಅನುಪಾತ): ಸಿಡಿ ಅನುಪಾತವು ಒಟ್ಟು ಸಾಲಗಳು ಮತ್ತು ಮುಂಗಡಗಳಿಗೂ ಹಾಗೂ ಒಟ್ಟು ಠೇವಣಿಗಳಿಗೂ ಇರುವ ಅನುಪಾತವಾಗಿದೆ. ಉತ್ತಮ ಲಾಭ ಗಳಿಸಲು 70% ರಿಂದ 75% ರಷ್ಟು ಸಿಡಿ ಅನುಪಾತವನ್ನು ಕಾಯ್ದುಕೊಳ್ಳಲು ಸೂಚಿಸಲಾಗುತ್ತದೆ.
2. ಸಾಲಗಳು ಮತ್ತು ಮುಂಗಡಗಳ ಮೇಲಿನ ಗಳಿಕೆ (Yield on loans and advances): ಇದನ್ನು ಲೆಕ್ಕಹಾಕಲು, ಸಾಲಗಳ ಮೇಲೆ

ಮಾಸಿಕ ಬಂದ ಬಡ್ಡಿಯನ್ನು ಎಲ್ಲಾ ತಿಂಗಳುಗಳ ಮಾಸಿಕ ಸರಾಸರಿ ಮುಂಗಡದಿಂದ ಭಾಗಿಸಲಾಗುತ್ತದೆ ಮತ್ತು 12 ತಿಂಗಳುಗಳ ಒಟ್ಟು ಮೊತ್ತವು, ಸಾಲಗಳು ಮತ್ತು ಮುಂಗಡಗಳ ಮೇಲಿನ ಸರಾಸರಿ ಗಳಿಕೆಯನ್ನು ನೀಡುತ್ತದೆ. ಮುಂಗಡಗಳ ಮೇಲೆ ವಿಧಿಸಲಾಗುವ ಬಡ್ಡಿ ದರವನ್ನು ಆಧರಿಸಿ 12% ರಿಂದ 14% ಗಳಿಕೆಯನ್ನು ಹೊಂದುವುದು ಆದರ್ಶಪ್ರಾಯವಾಗಿದೆ.

3. ಠೇವಣಿಗಳ ಮೇಲೆ ಪಾವತಿಸಿದ ಸರಾಸರಿ ಬಡ್ಡಿ – ನಿಧಿಯ ವೆಚ್ಚ (Average interest paid on Deposits / Cost of Fund): ಇದನ್ನು ಲೆಕ್ಕಹಾಕಲು, ಠೇವಣಿಗಳ ಮೇಲೆ ಮಾಸಿಕ ಪಾವತಿಸಿದ ಬಡ್ಡಿಯನ್ನು ಎಲ್ಲಾ ತಿಂಗಳುಗಳ ಮಾಸಿಕ ಸರಾಸರಿ ಠೇವಣಿಗಳಿಂದ ಭಾಗಿಸಲಾಗುತ್ತದೆ ಮತ್ತು 12 ತಿಂಗಳುಗಳ ಒಟ್ಟು ಮೊತ್ತವು ಠೇವಣಿಗಳ ಮೇಲಿನ ಸರಾಸರಿ ಬಡ್ಡಿಯನ್ನು ನೀಡುತ್ತದೆ. ಠೇವಣಿಗಳ ಮೇಲೆ ಪಾವತಿಸುವ ಬಡ್ಡಿ ದರವನ್ನು ಆಧರಿಸಿ ಈ ಅನುಪಾತವು 7% ರಿಂದ 9% ಇರುವುದು ಆದರ್ಶಪ್ರಾಯವಾಗಿದೆ.

4. ಸ್ಪ್ರೆಡ್ (Spread): ಸ್ಪ್ರೆಡ್ ಎಂದರೆ ಸಾಲಗಳ ಮೇಲೆ ಗಳಿಸಿದ ಸರಾಸರಿ ಬಡ್ಡಿ ಮತ್ತು ಠೇವಣಿಗಳ ಮೇಲೆ ಪಾವತಿಸಿದ ಸರಾಸರಿ ಬಡ್ಡಿಯ ನಡುವಿನ ವ್ಯತ್ಯಾಸವಾಗಿದೆ. ಸುಮಾರು 5% ರಷ್ಟು ಸ್ಪ್ರೆಡ್ ಇದ್ದರೆ ಸಂಘಕ್ಕೆ ಉತ್ತಮ ಲಾಭವಾಗುತ್ತದೆ. ವ್ಯವಹಾರದ ಪ್ರಮಾಣ ಹೆಚ್ಚಿದ್ದಾಗ 3% ರಿಂದ 4% ರಷ್ಟು ಸ್ಪ್ರೆಡ್ ಕೂಡ ಉತ್ತಮ ಎಂದು ಪರಿಗಣಿಸಲಾಗುತ್ತದೆ.

5. ಹೂಡಿಕೆಗಳ ಮೇಲಿನ ಗಳಿಕೆ (Yield on Investments): ಇದನ್ನು ಲೆಕ್ಕಹಾಕಲು, ಹೂಡಿಕೆಗಳ ಮೇಲೆ ಮಾಸಿಕ ಬಂದ ಬಡ್ಡಿಯನ್ನು ಎಲ್ಲಾ ತಿಂಗಳುಗಳ ಮಾಸಿಕ ಸರಾಸರಿ ಹೂಡಿಕೆಗಳಿಂದ ಭಾಗಿಸಲಾಗುತ್ತದೆ ಮತ್ತು 12 ತಿಂಗಳುಗಳ ಒಟ್ಟು ಮೊತ್ತವು ಹೂಡಿಕೆಗಳ ಮೇಲಿನ ಸರಾಸರಿ ಬಡ್ಡಿಯನ್ನು ನೀಡುತ್ತದೆ. ಹೂಡಿಕೆಗಳ ಮೇಲಿನ ಬಡ್ಡಿ ದರವನ್ನು ಆಧರಿಸಿ ಈ ಅನುಪಾತವು 7% ರಿಂದ 8.5% ಇರುವುದು ಆದರ್ಶಪ್ರಾಯವಾಗಿದೆ.

6. ಗಳಿಸುವ ಆಸ್ತಿಗಳ ಮೇಲಿನ ಗಳಿಕೆ (Yield on Earning Assets): ಸಾಲಗಳು ಮತ್ತು ಹೂಡಿಕೆಗಳನ್ನು ಒಳಗೊಂಡಿರುವ ಗಳಿಸುವ ಆಸ್ತಿಗಳ ಮೇಲೆ ಮಾಸಿಕ ಬಂದ ಬಡ್ಡಿಯನ್ನು ಎಲ್ಲಾ ತಿಂಗಳುಗಳ ಮಾಸಿಕ ಸರಾಸರಿ ಗಳಿಸುವ ಆಸ್ತಿಗಳಿಂದ ಭಾಗಿಸುವ ಮೂಲಕ ಇದನ್ನು ಲೆಕ್ಕಹಾಕಲಾಗುತ್ತದೆ ಮತ್ತು 12 ತಿಂಗಳುಗಳ ಒಟ್ಟು ಮೊತ್ತವು ಗಳಿಸುವ ಆಸ್ತಿಗಳ ಮೇಲಿನ ಸರಾಸರಿ ಗಳಿಕೆಯನ್ನು ನೀಡುತ್ತದೆ. ಗಳಿಸುವ ಆಸ್ತಿಗಳ ಮೇಲೆ ಬರುವ ಬಡ್ಡಿ ದರವನ್ನು ಆಧರಿಸಿ 11% ರಿಂದ 13% ರಷ್ಟು ಗಳಿಕೆಯನ್ನು ಹೊಂದುವುದು ಆದರ್ಶಪ್ರಾಯವಾಗಿದೆ.

7. ನಿವ್ವಳ ಬಡ್ಡಿ ಮಾರ್ಜಿನ್ (Net Interest Margin - NIM): ನಿವ್ವಳ ಬಡ್ಡಿ ಮಾರ್ಜಿನ್ (NIM) ಎಂದರೆ ಗಳಿಸುವ ಆಸ್ತಿಗಳ ಮೇಲೆ ಗಳಿಸಿದ ಸರಾಸರಿ ಬಡ್ಡಿ ಮತ್ತು ಠೇವಣಿಗಳು ಹಾಗೂ ಸಾಲಪಡೆಯುವಿಕೆಗಳ ಮೇಲೆ ಪಾವತಿಸಿದ ಸರಾಸರಿ ಬಡ್ಡಿಯ ನಡುವಿನ ವ್ಯತ್ಯಾಸವಾಗಿದೆ. ಸುಮಾರು 4% ರಷ್ಟು NIM ಇದ್ದರೆ ಸಂಘಕ್ಕೆ ಉತ್ತಮ ಲಾಭ ಬರುತ್ತದೆ. ವ್ಯವಹಾರದ ಪ್ರಮಾಣ ಹೆಚ್ಚಿದ್ದಾಗ 3% ರಿಂದ 3.5% ರಷ್ಟು NIM ಕೂಡ ಉತ್ತಮ ಎಂದು ಪರಿಗಣಿಸಲಾಗುತ್ತದೆ.

8. ದುಡಿಯುವ ಬಂಡವಾಳ (Working Capital): ದುಡಿಯುವ ಬಂಡವಾಳವು ನಿಗದಿತ ದಿನಾಂಕದಂದು ಹೊಂದಿರುವ ಷೇರು ಬಂಡವಾಳ, ಎಲ್ಲಾ ಕಾಯ್ದಿಟ್ಟ ನಿಧಿಗಳು, ಠೇವಣಿಗಳು ಮತ್ತು ಯಾವುದಾದರೂ ಸಾಲಪಡೆಯುವಿಕೆಗಳ ಒಟ್ಟು ಮೊತ್ತವಾಗಿದೆ.

9. ನಿವ್ವಳ ಮೌಲ್ಯ (Net worth): ನಿವ್ವಳ ಮೌಲ್ಯವು ಷೇರು ಬಂಡವಾಳ, ಎಲ್ಲಾ ಉಚಿತ ಕಾಯ್ದಿಟ್ಟ ನಿಧಿಗಳ ಒಟ್ಟು ಮೊತ್ತದಿಂದ ಯಾವುದಾದರೂ ಸಂಚಿತ ನಷ್ಟಗಳಿದ್ದರೆ ಅದನ್ನು ಕಳೆದ ನಂತರ ಬರುವ ಮೊತ್ತವಾಗಿದೆ. ಧನಾತ್ಮಕ ನಿವ್ವಳ ಮೌಲ್ಯವು ಸಂಘವು ಸುಸ್ಥಿರವಾಗಿರಲು ಸಾಧ್ಯ ಎಂಬುದರ ಸಂಕೇತವಾಗಿದೆ.

10. ಆಸ್ತಿಗಳ ಮೇಲಿನ ಆದಾಯ (Return on Assets - ROA): ಸೂತ್ರ: (ನಿವ್ವಳ ಲಾಭ / ಸರಾಸರಿ ಒಟ್ಟು ಆಸ್ತಿಗಳು) x 100. ಹೆಚ್ಚಿನ ROA ಆಸ್ತಿಗಳ ಸಮರ್ಥ ಬಳಕೆಯನ್ನು ಸೂಚಿಸುತ್ತದೆ.

11. ಪ್ರತಿ ಷೇರಿನ ಮೇಲಿನ ಗಳಿಕೆ (Earning per share): ಸೂತ್ರ: (ನಿವ್ವಳ ಲಾಭ / ಷೇರುಗಳ ಸಂಖ್ಯೆ) x 100.

12. ನಿವ್ವಳ ಲಾಭದ ಮಾರ್ಜಿನ್ (Net Profit Margin): ಸೂತ್ರ: (ನಿವ್ವಳ ಲಾಭ / ಒಟ್ಟು ಆದಾಯ) x 100.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು......

# ಸಹಕಾರಿ ಸಂಸ್ಥೆಗಳಲ್ಲಿ ಆಡಳಿತಾಧಿಕಾರಿ ಮತ್ತು ವಿಶೇಷಾಧಿಕಾರಿ ನೇಮಕಾತಿ

– ಶ್ರೀ ಸೂರ್ಯಕಾಂತ ರ‍್ಯಾಕಲೆ, ಹಿರಿಯ ಅಧಿಕಾರಿ, ಶಾಸನಾತ್ಮಕ ವಿಭಾಗ, ಕೇಂದ್ರ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಎಲ್ಲರೂ ನನಗಾಗಿ ನಾನು ಎಲ್ಲರಿಗಾಗಿ ಎನ್ನುವ ಪರಸ್ಪರ ಸಹಕಾರದ ತತ್ವದಡಿಯಲ್ಲಿ ರಚಿತವಾದ ಸಹಕಾರ ಸಂಘಗಳಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಸಹಕಾರ ತತ್ವವನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವುದು, ಸಹಕಾರ ಸಂಘಗಳ ಮೂಲಕ ದೇಶದ ಸುಸ್ಥಿರ ಅಭಿವೃದ್ಧ ಸಾಧ್ಯ ಎಂದು ಭಾವಿಸಿರುವ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಹಕಾರ ಕ್ಷೇತ್ರದಲ್ಲಿ ಹೊಸ ಹೊಸ ಯೋಜನೆಗಳನ್ನು ತರುವುದರ ಮುಖಾಂತರ ಸಹಕಾರ ಸಂಘಗಳನ್ನು ಪಾರದರ್ಶಕತೆ ಯೊಂದಿಗೆ ಜನಸಾಮನ್ಯರ ಭಾಗವಹಿಸುವಿಕೆಯೊಂದಿಗೆ ಬಲಪಡಿಸುತ್ತಿರುವುದು ಗಮನಿಸಬಹುದಾಗಿದೆ. ಇಂತಹ ಸಹಕಾರ ಸಂಘಗಳು ಉಪವಿಧಿ, ಕಾಯ್ದೆ ನಿಯಮಗಳ ವಿರುದ್ಧವಾಗಿ ಕಾರ್ಯಚಟುವಟಿಕೆ ಜರುಗುತಿದ್ದರೆ ಅದನ್ನು ಸರಿಪಡಿಸುವ ಉದ್ದೇಶದಿಂದ ಅಂತಹ ಸಹಕಾರ ಸಂಘಗಳನ್ನು ಸರಿಪಡಿಸುವ ಉದ್ದೇಶದಿಂದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 30 ರಂತೆ ಸಹಕಾರಿಗೆ ಆಡಳಿತಾಧಿಕಾರಿ ಮತ್ತು 31 ಎ ರಂತೆ ವಿಶೇಷಾಧಿಕಾರಿ ನೇಮಕ ಮಾಡಲಾಗುತ್ತಿದೆ. ಆಡಳಿತಾಧಿಕಾರಿ ಹಾಗೂ ವಿಶೇಷಾಧಿಕಾರಿಯ ಕಾರ್ಯ ಸ್ವರೂಪ ಒಂದೆ ರೀತಿ ಅನಿಸಿದರು ಸಹ ಬಹಳ ವ್ಯತ್ಯಾಸ ಹೊಂದಿರುವುದು ಕಂಡುಬರುತ್ತದೆ. ಆದ್ದರಿಂದ ಸಹಕಾರಿಯ ಆಡಳಿತಾಧಿಕಾರಿ ಹಾಗೂ ವಿಶೇಷಾಧಿಕಾರಿಯ ರಚನೆ, ಕಾರ್ಯಚಟುವಿಕೆ ಎರಡರ ಮದ್ಯದಲ್ಲಿರುವ ಸಾಮಿತ್ಯ ಹಾಗೂ ವ್ಯತ್ಯಾಸಗಳ ಬಗ್ಗೆ ತಿಳಿಯೋಣ.

### ಆಡಳಿತಾಧಿಕಾರಿ ನೇಮಕ

ಆಡಳಿತಾಧಿಕಾರಿ ಎಂದರೆ : ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 30 ರಂತೆ ನೇಮಕವಾದ ಸಿಬ್ಬಂದಿ/ವ್ಯಕ್ತಿ

### ಆಡಳಿತಾಧಿಕಾರಿ ನೇಮಕಾತಿ ಉದ್ಭವಾಗಲು ಕಾರಣಗಳು

### ಒಂದು ಸಹಕಾರಿಯ ಆಡಳಿತ ಮಂಡಳಿಯು

1. ಸೌಹಾರ್ದ ಸಹಕಾರಿ ಅಧಿನಿಯಮ ಅಥವಾ ನಿಯಮಗಳ ಅಥವಾ ಉಪವಿಧಿಗಳ ಅಡಿಯಲ್ಲಿ ವಿಧಿಸಲಾಗಿರುವ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರವಾಗಿ ತಪ್ಪು ಮಾಡುತ್ತಿದೆ ಅಥವಾ ನಿರ್ಲಕ್ಷ್ಯ ತೋರುತ್ತಿದೆ; ಅಥವಾ
2. ಸಹಕಾರಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾದ ಯಾವುದೇ ಕಾರ್ಯವನ್ನು ಮಾಡಿದೆ; ಅಥವಾ
3. ನಿರ್ದೇಶಕರ ಅನರ್ಹತೆ, ರಾಜೀನಾಮೆ, ಮರಣ ಅಥವಾ ಅವರನ್ನು ತೆಗೆದುಹಾಕಿರುವುದರಿಂದ ಮಂಡಳಿಯ ಸದಸ್ಯರ ಸಂಖ್ಯೆ ಕೋರಂ ಆಗಲು ಅಗತ್ಯವಿರುವ ಸಂಖ್ಯೆಗಿಂತ ಕಡಿಮೆಯಿದೆಯೆಂಬ ಕಾರಣದಿಂದ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ; ಅಥವಾ
4. ಈ ಅಧಿನಿಯಮದ ಉಪಬಂಧಗಳು ಅಥವಾ ನಿಯಮಗಳು ಅಥವಾ (ಉಪವಿಧಿಗಳಿಗೆ) ಅನುಸಾರವಾಗಿ ಕಾರ್ಯನಿರ್ವಹಿಸುತ್ತಿಲ್ಲ; ಅಥವಾ
5. ಸಹಕಾರ ವರ್ಷವು ಮುಕ್ತಾಯವಾದ ಆರು ತಿಂಗಳೊಳಗೆ ಆದರೆ ಪ್ರತಿ ವರ್ಷ ಸೆಪ್ಟೆಂಬರ್ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ತಪ್ಪಿದೆ; ಅಥವಾ
6. ಗುರುತರವಾದ ಆರ್ಥಿಕ ಅವ್ಯವಹಾರಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡುಬಂದಿದೆ; ಅಥವಾ
7. ಸಹಕಾರಿಯ ರಚನೆ ಅಥವಾ ಕೆಲಸ ಕಾರ್ಯಗಳಿಗೆ ಇಕ್ಕಟ್ಟಿನ ಸ್ಥಿತಿ ಉಂಟಾಗಿದೆ; ಅಥವಾ
8. ಚುನಾವಣೆಯನ್ನು ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಅಗತ್ಯವಾದ ನೆರವನ್ನು ನೀಡಲು ವಿಫಲವಾಗಿದೆ ಮತ್ತು ಯಾವುದೇ ಕಾರಣದಿಂದ ಚುನಾವಣಾ ಪ್ರಾಧಿಕಾರವು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯ ಮುಕ್ತಾಯದ ನಿಕಟಪೂರ್ವದಲ್ಲಿ ಚುನಾವಣೆಯನ್ನು ನಡೆಸಿರುವುದಿಲ್ಲ; ಅಥವಾ
9. ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಒಂದರೊಳಗಾಗಿ ಲೆಕ್ಕಪತ್ರಗಳ ಪರಿಶೋಧನೆ ಯನ್ನು ಪೂರ್ಣ ಮಾಡಿಸಿ ಲೆಕ್ಕಪರಿಶೋಧನಾ ವರದಿಯನ್ನು ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾಗಿದೆ; ಅಥವಾ
10. ಅನ್ಯಥಾ ಸರಿಯಾಗಿ ಕಾರ್ಯನಿರ್ವಹಿಸದಿದ್ದಲ್ಲಿ.

ಮೇಲ್ಕಂಡ ಅಂಶಗಳ ಆಧಾರದ ಮೇಲೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ರವರು ಸಹಕಾರಿಗೆ ಆಡಳಿತಾಧಿಕಾರಿ ನೇಮಕಮಾಡಲಾಗುತ್ತದೆ.

ಅಡಾಳಿತಾಧಿಕಾರಿಯ ನೇಮಕ ಮತ್ತು ಅವಧಿ : ಸಂಯುಕ್ತ ಸಹಕಾರಿಯು ಅಭಿಪ್ರಾಯಪಟ್ಟಲ್ಲಿ ಸಹಕಾರಿಯ ಆಡಳಿತ ಮಂಡಳಿಯನ್ನು ರದ್ದುಗೊಳಿಸಬಹುದು ಅಥವಾ ಅಮಾನತ್ತಿನಲಿಟ್ಟು ಒಂದು ವರ್ಷ ಮೀರದ ಅವಧಿಗೆ ಸಹಕಾರಿಯ ವ್ಯವಹಾರಗಳನ್ನು ನಿರ್ವಹಿಸಲು ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗುತ್ತದೆ.

**ಆಡಳಿತಾಧಿಕಾರಿಯ ಪ್ರಕಾರ್ಯಗಳು :** ಆಡಳಿತಾಧಿಕಾರಿ ಕಾಯಿದೆ ಕಲಂ.38(3) ರನ್ವಯ, ಸಂಯುಕ್ತ ಸಹಕಾರಿಯ ನಿಯಂತ್ರಣ ಕ್ಕೊಳಪಟ್ಟು ಸಹಕಾರಿಯ ಮಂಡಳಿ ಅಥವಾ ಪದಾಧಿಕಾರಿಯ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು

1. ಆಡಳಿತಾಧಿಕಾರಿಯ ಎಲ್ಲಾ ಪ್ರಕಾರ್ಯಗಳು ಸಹಕಾರಿಯ ಹಿತಾಸಕ್ತಿಗೆ ಪೂರಕವಾಗಿರತಕ್ಕದ್ದು.
2. ಸಹಕಾರಿಯ ನಡವಳಿಕೆ ಪುಸ್ತಕದಲ್ಲಿ ಅಧಿಕಾರ ವಹಿಸಿಕೊಂಡ ಬಗ್ಗೆ ತೀರ್ಮಾನ ಮಾಡಿ, ಸಂಯುಕ್ತ ಸಹಕಾರಿ/ ನಿಬಂಧಕರಿಗೆ ಲಿಖಿತವಾಗಿ ತಿಳಿಸಬೇಕು.
3. ಸಹಕಾರಿ ಖಾತೆ ಇರುವ ಬ್ಯಾಂಕ್‌ಗಳು ಮತ್ತು ಇತರ ಸಂಸ್ಥೆಗಳಿಗೆ, ಮಂಡಳಿ ಅಸ್ತಿತ್ವದಲ್ಲಿ ಇಲ್ಲ ಎಂಬುದನ್ನು ತಿಳಿಸಬೇಕು.
4. ಸಹಕಾರಿ ನಗದು ಪುಸ್ತಕ, ಠರಾವು ಪುಸ್ತಕ, ಚರ ಮತ್ತು ಸ್ಥಿರ ಆಸ್ತಿಗಳನ್ನು ವಶಕ್ಕೆ ಪಡೆಯಬೇಕು.
5. ಪ್ರತಿವರ್ಷ ಸೆಪ್ಟೆಂಬರ್ ತಿಂಗಳ ಒಂದರೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಿಕೊಡುವಂತೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪಡೆಯಬೇಕು.
6. ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಇಪ್ಪತ್ತೈದರೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು;
7. ಸಾಮಾನ್ಯ ನಿಕಾಯದ ಅನುಮೋದನೆಗಾಗಿ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಯೋಜನೆ ಮತ್ತು ಬಜೆಟ್ಟನ್ನು ಮಂಡಿಸಬೇಕು
8. ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಪರಿಶೀಲಿಸಿ, ವಿಚಾರಣೆಯಲ್ಲಿ ತೋರಿಸಲಾದ ಅಕ್ರಮಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸರಿಪಡಿಸಲು ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಪರಿಶೀಲಿಸಲು ಮತ್ತು ಅದನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸಬೇಕು.
9. ಅಗತ್ಯವಿದ್ದಾಗಲೆಲ್ಲ ಅಥವಾ ಕೋರಿಕೆಯ ಮೇರೆಗೆ ವಿಶೇಷ ಸಾಮಾನ್ಯ ಸಭೆಯನ್ನು ನಡೆಸಬೇಕು.
10. ಪ್ರತಿ ವರ್ಷ ಸೆಪ್ಟೆಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಲ್ಲಿಸಬೇಕು.
11. ಸಾಮಾನ್ಯ ನಿಕಾಯವು ಪ್ರತ್ಯಾಯೋಜಿಸಬಹುದಾದಂಥ ಅಥವಾ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಬೇಕು.
12. ಇದರ ಜೊತೆಗೆ ಚುನಾವಣಾ ಪ್ರಾಧಿಕಾರದ ಜೊತೆ ಪತ್ರ ವ್ಯವಹಾರ ಮಾಡಿ, ಅಗತ್ಯ ಮಾಹಿತಿಯನ್ನು ತಯಾರಿಸಿ, ಹೊಸದಾಗಿ ಮಂಡಳಿಗೆ ಚುನಾವಣೆ ನಡೆಸಲು ಕ್ರಮ ಜರುಗಿಸತಕ್ಕದ್ದು. ಅಮಾನತ್ತಿನಲ್ಲಿಟ್ಟ ಸಹಕಾರಿ ಮಂಡಳಿಗೆ ಸಂಬಂಧಪಟ್ಟಂತೆ, ಸಾಧ್ಯವಾದ ಮಟ್ಟಿಗೆ ಕಾರಣ ಕೇಳುವ ನೋಟೀಸ್‌ನಲ್ಲಿ ಸೂಚಿಸಿದ ನ್ಯೂನತೆಗಳನ್ನು ಸರಿಪಡಿಸಲು ಪ್ರಯತ್ನಿಸಬೇಕು.
13. ಆಡಳಿತಾಧಿಕಾರಿ ಅವಧಿ ಮುಗಿಯುವ ಪೂರ್ವದಲ್ಲಿ ಹೊಸ ಆಡಳಿತ ಮಂಡಳಿ ಚುನಾವಣೆ ಮುಕ್ತಾಯವಾಗಿ ಅಧಿಕಾರ ಸ್ವೀಕರಿಸಲು ಅನುವು ಮಾಡಿಕೊಡಬೇಕು, ಹಾಗೂ ಆಡಳಿತ ಮಂಡಳಿ ಮಾಡಿದ ತಪ್ಪುಗಳನ್ನು ಸರಿಪಡಿಸುವ ಬದಲು, ಅದೇ ನೀತಿ ಮುಂದುವರಿಸುವುದು, ಅಥವಾ ಹೊಸದಾಗಿ ನಿಯಮ ರೂಪಿಸಲುಹೋಗಿ ಹೊಸ ನ್ಯೂನತೆಗಳಿಗೆ ಅವಕಾಶ ನೀಡದಂತೆ ಕಾರ್ಯನಿರ್ವಹಿಸಬೇಕು.ಆಡಳಿತಾಧಿಕಾರಿಯ ಅವಧಿಯಲ್ಲಿ ಯಾವುದೇ ಅವ್ಯವಹಾರ ನಡೆಯದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಆಡಳಿತಾಧಿಕಾರಿ ಸಂಯುಕ್ತ ಸಹಕಾರಿಯಿಂದ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.

**ವಿಶೇಷಾಧಿಕಾರಿ ನೇಮಕ ಕಲಂ.38ಎ :**

ವಿಶೇಷಾಧಿಕಾರಿ ಎಂದರೆ : ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿ ಅಧಿನಿಯಮ 1997 ರ ಕಲಂ 38ಎ ರಂತೆ ನೇಮಕವಾದ ಸಿಬ್ಬಂದಿ/ವ್ಯಕ್ತಿ

**ವಿಶೆಷಾಧಿಕಾರಿ ನೇಮಕಾತಿಗೆ ಕಾರಣಗಳು:**

1. ಸಹಕಾರಿಯ ನಿರ್ದೇಶಕರ ಅನರ್ಹತೆ, ರಾಜೀನಾಮೆ ಅಥವಾ ಮರಣ ಅಥವಾ ಅವರನ್ನು ತೆಗೆದು ಹಾಕಿರುವುದರಿಂದ ಮಂಡಳಿಯ ಸದಸ್ಯರ ಸಂಖ್ಯೆಯು ಅಗತ್ಯವಿರುವ ಕೋರಂ ಸಂಖ್ಯೆಗಿಂತ ಕಡಿಮೆ ಹೊಂದಿದಾಗ.
2. ಸಹಕಾರಿಯ ಆಡಳಿತ ಮಂಡಳಿಯ ಪದಾವಧಿ ಮುಕ್ತಾಯವಾಗಿದ್ದು, ನೂತನ ಮಂಡಳಿಯು ರಚನೆಯಾಗಿಲ್ಲದಿದ್ದಲಿ.

**ವಿಶೇಷಾಧಿಕಾರಿಯ ನೇಮಕ ಮತ್ತು ಅವಧಿ :** ಸಹಕಾರಿಯಲ್ಲಿ ಮೆಲ್ಕಂಡ ಕಾರಣಗಳು ಉಂಟಾದಾಗ ಸಂಯುಕ್ತ ಸಹಕಾರಿಯು ಮೇಲ್ಕಂಡ ಕಾರಣಕ್ಕಾಗಿ ಆರು ತಿಂಗಳಿಗೆ ಮೀರದ ಅವಧಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಲಾಗುತ್ತದೆ.

**ವಿಶೇಷಾಧಿಕಾರಿಯ ಪ್ರಕಾರ್ಯಗಳು:**

1. ಸಹಕಾರಿಯ ನಡವಳಿಕೆ ಪುಸ್ತಕದಲ್ಲಿ ಅಧಿಕಾರ ವಹಿಸಿಕೊಂಡ ಬಗ್ಗೆ ತೀರ್ಮಾನ ಮಾಡಿ, ಸಂಯುಕ್ತ ಸಹಕಾರಿ/ ಸಂಬಂಧ ಪಟ್ಟ ನಿಬಂಧಕರಿಗೆ ಲಿಖಿತವಾಗಿ ತಿಳಿಸಬೇಕು
2. ಆಡಳಿತ ಮಂಡಳಿಯ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಕುರಿತು. (ಸಹಕಾರ ಚುನಾವಣಾ ಆಯೋಗ)ಕ್ಕೆ ವಿಶೇಷಾಧಿಕಾರಿಯು ಮಾಹಿತಿ ಒದಗಿಸತಕ್ಕದ್ದು.
3. ಸಹಕಾರಿಯ ಚುನಾವಣಾ ಪ್ರಾಧಿಕಾರ ಖಾಲಿ ಇರುವ ಸ್ಥಾನಗಳ ಉಳಿದ ಅವಧಿಗೆ ಚುನಾವಣೆಯನ್ನು ನಡೆಸತಕ್ಕದ್ದು.
4. ವಿಶೇಷಾಧಿಕಾರಿ ನೇಮಿಸಿದ ನಂತರ ಸಹಕಾರಿಗೆ ಹೊಸದಾಗಿ ಚುನಾವಣೆ ಮಾಡುವ ಕೆಲಸದ ಜೊತೆ, ಸಹಕಾರಿಯ ದಿನ ನಿತ್ಯದ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Permitted to Post under Periodical Post as per the Letter G3/14/RNP/2024-25 DATE 29.09.2025

ವ್ಯವಹಾರದಲ್ಲಿ ಅಧಿಕಾರ ವಹಿಸಿಕೊಂಡ ದಿನದಿಂದ, ಹೊಸ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಳ್ಳುವ ತನಕ, ಮೇಲ್ಮಿಚಾರಣೆ ಮಾಡುವ ಜವಾಬ್ದಾರಿ ಇರತಕ್ಕದ್ದು.

5. ಚುನಾವಣೆ ನಡೆದು ಆಡಳಿತ ಮಂಡಳಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆ ಆದ ಕೂಡಲೇ ವಿಶೇಷಾಧಿಕಾರಿಯು ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸತಕ್ಕದ್ದು ಮತ್ತು ವಿಶೇಷಾಧಿಕಾರಿಯು ಸ್ಥಾನ ತೆರವುಗೊಳಿಸಿರುವುದಾಗಿ ಭಾವಿಸತಕ್ಕದ್ದು." ಹಾಗೂ ಅಧಿಕಾರ ಹಸ್ತಾಂತರದ ಮಾಹಿತಿ ಸಂಯುಕ್ತ ಸಹಕಾರಿ/ಸಂಬಂಧ ಪಟ್ಟ ನಿಬಂಧಕರಿಗೆ ಲಿಖಿತವಾಗಿ ಆಡಳಿತ ಮಂಡಳಿಯ ಘೋಷಣೆ ಪ್ರತಿ ಲಗತ್ತಿಸಿ ಮಾಹಿತಿ ತಿಳಿಸಬೇಕು.

ಆಡಳಿತಗಾರ ಅಥವಾ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆ: ಆಡಳಿತಗಾರ ಅಥವಾ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆ ಸರ್ಕಾರದ ಅಥವಾ ಒಂದು ಸಹಕಾರಿ ಸಂಸ್ಥೆಯ ಯಾವುದೇ ಅಧಿಕಾರಿ ಅಥವಾ ನೌಕರನನ್ನು ಅಧಿನಿಯಮದ ಪ್ರಕರಣ 38 ಅಡಿ ನೇಮಕ ಮಾಡಲ್ಪಟ್ಟ ಆಡಳಿತಗಾರ ಅಥವಾ ಪ್ರಕರಣ 38ಎ ಅಡಿಯಲ್ಲಿ ನೇಮಕವಾದ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆಯನ್ನು ಕೆಳಗಿನಂತೆ ನಿರ್ದಿಷ್ಟ ಪಡಿಸತಕ್ಕದ್ದು.

1. ಆತನನ್ನು ಪೂರ್ಣಕಾಲಿಕವಾಗಿ ನೇಮಿಸಿದಲ್ಲಿ ಆತನ ಸಂಬಳ ಮತ್ತು ಭತ್ಯೆಗಳನ್ನು ಸಹಕಾರಿಯು ಭರಿಸತಕ್ಕದ್ದು. ಆತನಿಗೆ ಇಲಾಖೆಯಲ್ಲಿ ಅಥವಾ ಸಂಸ್ಥೆಯಲ್ಲಿ ಅನ್ವಯವಾಗುವ ಸೇವಾ ನಿಯಮಗಳು, ಸಹಕಾರಿಯ ಆಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ಕೆಲಸ ನಿರ್ವಹಿಸುವಾಗಲೂ ಅನ್ವಯಿಸತಕ್ಕದ್ದು;

2. ಆತನನ್ನು ಆತನ ನಿಯತ ಹುದ್ದೆಗೆ ಹೆಚ್ಚುವರಿಯಾಗಿ ಆಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ನೇಮಿಸಿದ್ದಲ್ಲಿ, ಆತನಿಗೆ, ಆತನು ಧಾರಣ ಮಾಡಿದ ಹುದ್ದೆಯ ಮೂಲ ವೇತನದ ಗರಿಷ್ಠ ಶೇಕಡಾ ಹತ್ತರಷ್ಟನ್ನು ಸಂಭಾವನೆ ಎಂದು ಸಹಕಾರಿಯ ನಿಧಿಗಳಿಂದ ಕೊಡತಕ್ಕದ್ದು.

ಸಹಕಾರಿಯ ಆಡಳಿತಾಧಿಕಾರಿ ಹಾಗೂ ವಿಶೇಷಾಧಿಕಾರಿಯ ಕಾರ್ಯಚಟುವಟಿಕೆಗಳನ್ನು ಪರಿಶಿಲಿಸಿದಾಗ ವಿಶೇಷಾಧಿಕಾರಿಯ ಎಲ್ಲಾ ಕಾರ್ಯಗಳು ಆಡಳಿತಾಧಿಕಾರಿಯ ಕಾರ್ಯಚಟುವಟಿಕೆಗಳಲ್ಲಿ ಹೊಂದಿವೆ, ವಿಶೇಷಾಧಿಕಾರಿ ನೇಮಕಾತಿ ಸಹಕಾರಿಯ ನೂತನ ಆಡಳಿತ ಮಂಡಳಿ ರಚನೆಗೆ ಹೆಚ್ಚು ಒತ್ತುಕೊಟ್ಟರೆ ಆಡಳಿತಾಧಿಕಾರಿಯ ನೇಮಕಾತಿ ಸಹಕಾರಿಯಲ್ಲಿ ಆಗಿರುವ ಅವ್ಯವಹಾರ, ಉಲ್ಲಂಘನೆ ಹಾಗೂ ತೊಡಕಗಳನ್ನು ನಿವಾರಿಸಿ ನೂತನ ಆಡಳಿತ ಮಂಡಳಿ ರಚಿಸಿ ಸಹಕಾರಿಯ ಕಾರ್ಯಚಟುವಟಿಕೆ ಸುಗಮವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತದೆ.

ಸೌಹಾರ್ದ ಸಹಕಾರಿಗಳಲ್ಲಿ ಎಂಥದೇ ಸಂದರ್ಭ ಬಂದಾಗಲು ಸಹ ವಿಶೇಷಾಧಿಕಾರಿ ಅಥವಾ ಆಡಳಿತಾಧಿಕಾರಿ ನೇಮಕಾತಿ ಮಾಡುವಂತ ಸಂದರ್ಭ ಬರದಂತೆ ಕಾರ್ಯನಿರ್ವಹಿಸುತ್ತಾರೆ ಎಂಬ ಆಶಾಭಾವನೆ ಹೊಂದಿದ್ದೇನೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003